ಸಂಪುಟ 01 | ಸಂಚಿಕೆ 130 | ಗುರುವಾರ 16 ಜುಲೈ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ
ಮಾನ್ವಿ, ಲಿಂಗಸೂರು,
ರಾಯಚೂರ,ದೇವದುರ್ಗ
ಬಳ್ಳಾರಿ, ಕೊಪ್ಪಳ
ಯಾದಗಿರಿ, ಕಲಬುರ್ಗಿ,
ಬೀದರ, ವಿಜಯಪುರ.
ಗದಗ, ವಿಜಯನಗರ.
ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

**1) ವಿಶ್ವ ಹಾವಿನ ದಿನ (World Snake Day)**

ಹಾವುಗಳ ಸಂರಕ್ಷಣೆ, ಅವುಗಳ ಪರಿಸರದಲ್ಲಿನ ಮಹತ್ವ ಹಾಗೂ ಜನರಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ಆಚರಿಸಲಾಗುತ್ತದೆ.

**2) ಕೃತಕ ಬುದ್ಧಿಮತ್ತೆ ಮೆಚ್ಚುಗೆ ದಿನ (Artificial Intelligence Appreciation Day)**

ಕೃತಕ ಬುದ್ಧಿಮತ್ತೆ ಮೆಚ್ಚುಗೆ ದಿನವನ್ನು (Artificial Intelligence Appreciation Day) ಪ್ರತಿವರ್ಷ ಜುಲೈ 16 ರಂದು ಆಚರಿಸಲಾಗುತ್ತದೆ. ಈ ದಿನವು ಆರೋಗ್ಯ, ಶಿಕ್ಷಣ, ಕೃಷಿ, ವಿಜ್ಞಾನ, ಕೈಗಾರಿಕೆ, ಸಾರಿಗೆ, ಬ್ಯಾಂಕಿಂಗ್ ಹಾಗೂ ದೈನಂದಿನ ಜೀವನದಲ್ಲಿ ಕೃತಕ ಬುದ್ಧಿಮತ್ತೆ (ಎಐ) ನೀಡುತ್ತಿರುವ ಕೊಡುಗೆಗಳನ್ನು ಗುರುತಿಸಿ, ಅದರ ಬಗ್ಗೆ ಅರಿವು ಮೂಡಿಸಲು ಆಚರಿಸಲಾಗುತ್ತದೆ.

## ಸುಭಾಷಿತ

ಚಿಂತನೆಯ ಮನಸ್ಸು ನಿಮ್ಮ ಮೂಲ
ಆಸ್ತಿಯಾಗಿರಬೇಕು ಆಗ ಜೀವನದಲ್ಲಿ
ಏಳು ಬೀಳುಗಳು ಬಂದ್ರೂ ದೃಢವಾಗಿ
ನಿಲ್ಲಬಹುದು

–ಅಬ್ದುಲ್ ಕಲಾಂ

# ಬಿಡದಿ ಟೌನ್ ಶಿಪ್ ಗಲಾಟೆ

## ದಿಢೀರ್ ಸುದ್ದಿಗೋಷ್ಠಿಯಲ್ಲಿ ಸಿಎಂ ಡಿಕೆಶಿ ಹೇಳಿದ್ದೇನು..

❑ ನೈಜ್ಯ ದೆಸೆ ನ್ಯೂಸ್



**ಬೆಂಗಳೂರು: "ಬಿಡದಿ ಟೌನ್ ಶಿಪ್ ವಿಚಾರದಲ್ಲಿ ಸರ್ಕಾರವು ಯಾವುದೇ ರೈತರಿಂದ ಬಲವಂತವಾಗಿ ಜಮೀನು ಪಡೆಯುವುದಿಲ್ಲ. ಸ್ವಇಚ್ಛೆಯಿಂದ ಮುಂದೆ ಬಂದು ಭೂಮಿ ಕೊಟ್ಟವರಿಗೆ ಪರಿಹಾರ ನೀಡುತ್ತೇವೆ. ಈ ವಿಚಾರದಲ್ಲಿ ರೈತರ ಅಹವಾಲು, ಅಭಿಪ್ರಾಯ ಪಡೆಯಲು ಸಮಿತಿ ರಚಿಸಲಾಗುವುದು" ಎಂದು ಸಿಎಂ ಡಿ ಕೆ ಶಿವಕುಮಾರ್ ತಿಳಿಸಿದ್ದಾರೆ.ವಿಧಾನಸೌಧದಲ್ಲಿ ಬುಧವಾರ ಮಾಧ್ಯಮಗೋಷ್ಠಿ ನಡೆಸಿ ಶಿವಕುಮಾರ್ ಅವರು ಮಾತನಾಡಿದರು.**

ಯಾವ ಪ್ರತಿಭಟನೆ ಅಗತ್ಯವಿಲ್ಲ, ನಿಮ್ಮ ಜಮೀನಿನಲ್ಲಿ ನೆಮ್ಮದಿಯಾಗಿರಿ : "ಯಾರ ಆಸ್ತಿಯನ್ನು ನಾವು ಬಲವಂತವಾಗಿ ಪಡೆಯುವುದಿಲ್ಲ. ಜಮೀನು ನೀಡಲು ಇಷ್ಟವಿಲ್ಲದವರು ನೆಮ್ಮದಿಯಾಗಿ ತಮ್ಮ ಜಮೀನಿನಲ್ಲಿ ಇರಬಹುದು. ಯಾವ ಧರಣಿ, ಪ್ರತಿಭಟನೆ ಅವಶ್ಯಕತೆ ಇಲ್ಲ. ಮುಖ್ಯಮಂತ್ರಿಗಳಾಗಿದ್ದಾಗ ಕುಮಾರಸ್ವಾಮಿ ಹಾಗೂ ಯಡಿಯೂರಪ್ಪನವರು ಮಾರ್ಗದರ್ಶನದಂತೆ ಯೋಜನೆ ಪ್ರಕ್ರಿಯೆ ಮುಂದುವರಿದಿದೆ. ನಾನು ಯಾರಿಗೂ ಬಲವಂತ ಮಾಡುವುದಿಲ್ಲ. ಅವರು ಹೊರಡಿಸಿರುವ ರೆಡ್ ಜೋನ್ ಆದೇಶ ಮುಂದುವ–ರಿಯುತ್ತದೆ. ಭೂಮಿ ನೀಡಲು ಇಷ್ಟವಿಲ್ಲದವರಿಗೆ ನಾನು ಬಲವಂತ ಮಾಡುವುದಿಲ್ಲ. ನಾನು ರೈತರು ಹಾಗೂ ಅಧಿಕಾರಿಗಳ ಜೊತೆ ಸಭೆ ಮಾಡಿ ಈ ತೀರ್ಮಾನ ಮಾಡಿದ್ದೇವೆ. ಇಷ್ಟವಿಲ್ಲದವರು ಅವರ ಭೂಮಿ ಅವರೇ ಇಟ್ಟುಕೊಳ್ಳಲಿ. ಕುಮಾರಸ್ವಾಮಿ ಅವರು ಪ್ರತಿ ಎಕರೆಗೆ 8 ಸಾವಿರ ಅಡಿ ಅಭಿವೃದ್ಧಿಪಡಿಸಿದ ಭೂಮಿ ನೀಡಲು ಮುಂದಾಗಿದ್ದರು. ನಾವು 50% ಅಂದರೆ 9500 ಅಡಿ ಭೂಮಿ ನೀಡಲು ತೀರ್ಮಾನಿಸಿದೆವು. ಸ್ವಯಂ ಇಚ್ಛೆಯಿಂದ ಬರುವವರಿಗೆ ಪರಿಹಾರ ನೀಡಿ ಭೂಮಿ ಪಡೆಯುತ್ತೇವೆ" ಎಂದು ಸ್ಪಷ್ಟಪಡಿಸಿದರು.

ರಾಜಕೀಯಕ್ಕೆ ಬಲಿಯಾಗಬೇಡಿ, ನಿಮ್ಮ ಬದುಕು ನೀವು ಕಟ್ಟಿಕೊಳ್ಳಿ; ರೈತರಿಗೆ ಮನವಿ "ರೈತರು ಹೋರಾಟ ಧರಣಿ ಬಿಟ್ಟು ನಿಮ್ಮ ಬದುಕು ಕಟ್ಟಿಕೊಳ್ಳಿ. ರಾಜಕೀಯಕ್ಕಾಗಿ ಇವರು ನಿಮ್ಮನ್ನು ಬಲಿ ಕೊಡುತ್ತಿದ್ದಾರೆ. ನೀವು ಬಲಿಯಾಗಬೇಡಿ. ಸಮಿತಿಯವರು ನಿಮ್ಮ ಬಳಿಗೆ ಬಂದಾಗ, ಸಮಿತಿ ಮುಂದೆ ನಿಮ್ಮ ಅಭಿಪ್ರಾಯ ಹೇಳಿಕೊಳ್ಳಿ. ಹೊಡೆಯುವುದಾದರೆ ಬಂದು ನನಗೆ ಹೊಡೆಯಿರಿ" ಎಂದು ಮನವಿ ಮಾಡಿದರು.

ನನ್ನನ್ನು ಜೈಲಿಗೆ ಕಳುಹಿಸುವ ಅವರ ಪ್ರಯತ್ನ ಮುಂದುವರಿಯಲಿ, ನಾನು ಸಿದ್ಧನಿದ್ದೇನೆ "ನಿಮಗೆ ಆಸೆ ಇದ್ದರೆ ನಿಮ್ಮ ಪ್ರಯೋಗಗಳು ನನ್ನ ಮೇಲೆ ಆಗಲಿ. ಈಗಾಗಲೇ ನನ್ನ ಮೇಲೆ ಕೇಸು, ಕೌಂಟರ್ ಕೇಸು ಪ್ರಯೋಗಗಳು ನಡೆಯುತ್ತಿವೆ. ಜೈಲಿಗೆ ಹೋಗುವ ದಿನ ಹತ್ತಿರ ಬಂದಿದೆ ಎಂದು ಕುಮಾರಣ್ಣ ಹೇಳಿದ್ದಾರೆ. ನಾನು ಸಿದ್ಧನಿದ್ದೇನೆ ಕುಮಾರಣ್ಣ. ನಿನ್ನ ಆಶೀರ್ವಾದ. ನಾನು ಕೃಷ್ಣನ ಜನ್ಮ ಸ್ಥಳದಲ್ಲಿ ಇದ್ದವನು. ನೀನು ಬಂದು ಭೇಟಿ ಮಾಡಿದ್ದೆ. ನಿಮ್ಮ ಪ್ರಯತ್ನ ಹೋರಾಟ, ನಿಮ್ಮ ಶ್ರಮ ಎಲ್ಲವೂ ನನಗೆ ಗೊತ್ತಿದೆ. ಬೇರೆ ಯಾವ ನಾಯಕರು ಬೆಳೆಯಬಾರದು ಎಂಬ ನಿಮ್ಮ ಮನಸ್ಥಿತಿ ನನಗೆ ಅರಿವಿದೆ. ಆದರೂ ನಿಮ್ಮ ಹಿರಿತನಕ್ಕೆ ನಮಸ್ಕರಿಸುವುದು ನನ್ನ ಧರ್ಮ. ನಾನು ಕೊಡುವ ಗೌರವ ನಿಮ್ಮಿಂದ ಸ್ವೀಕರಿಸಲು ಆಗದಿದ್ದರೆ ಅದು ನಿಮ್ಮ ಪಾಡು. ನಾನು ಯಾರಿಗೂ ಕೆಟ್ಟದ್ದು ಬಯಸುವವನಲ್ಲ, ನಿಮಗೂ ಕೆಟ್ಟದ್ದನ್ನು ಬಯಸುವುದಿಲ್ಲ. ನನ್ನನ್ನು ಜೈಲಿಗೆ ಕಳಿಸಬೇಕು ಎಂಬ ಸಂಕಲ್ಪ ಮಾಡಿದ್ದಿರೋ ಅದನ್ನು ಮುಂದುವರಿಸಿ. ಆ ಜೈಲಿಗೆ ಹೋಗಿ ಬಂದೇ ನಾನು ರಾಜ್ಯದ ಮುಖ್ಯಮಂತ್ರಿಯಾಗಿ ಕೂತಿದ್ದೇನೆ. ನಾನು ಜೈಲಿಗೆ ಹೋದಾಗ ಜನ ಹೇಗೆ ನನ್ನ ಪರವಾಗಿ ನಿಂತರು ಎಂಬುದನ್ನು ನಾನು ಕಣ್ಣಾರೆ ನೋಡಿದ್ದೇನೆ. ನಾನು ಜೈಲಿಗೆ ಹೋಗಿದ್ದ ಕೇಸ್ ಎರಡೂವರೆ ವರ್ಷಗಳಲ್ಲಿ ವಜಾವಾಗಿದೆ. ಸುಪ್ರೀಂ ಕೋರ್ಟ್ ಪಾದಕ್ಕೆ ನಾನು ಇಲ್ಲಿಂದಲೇ ನಮಿಸುತ್ತೇನೆ. ಆ ಜೈಲಿನ ಕೋಣೆಯಲ್ಲಿ ನಾನು ನನ್ನ ಕುಟುಂಬ ಅನುಭವಿಸಿದ ನೋವು ನಮಗೆ ಮಾತ್ರ ಗೊತ್ತು. ನನಗಾಗಿ ರಾಜ್ಯದ ನನ್ನ ತಾಯಂದಿರು,

2ನೇ ಪುಟಕ್ಕೆ

## ಮಳೆಗಾಗಿ ಮಹಿಳೆಯರು ಕಪ್ಪೆಯ ಮೊರೆ,ಊರಲ್ಲಿ ಧ್ಯಾನ ಸಂಗ್ರಹ, ಊರಿಗೆ ಊಟ

❑ ನೈಜ್ಯ ದೆಸೆ ನ್ಯೂಸ್

**ಹಾಲಾಪೂರ: ಬಾರೊ ಬಾರೊ ಮಳೆರಾಯ,ಮಹರಾಯ ಮಳೆರಾಯ,ಬಾರಯ್ಯ ಮಳೆರಾಯ ಇದು ಮಳೆಗಾಗಿ ಭಕ್ತಿಯಿಂದ ಪ್ರಾರ್ಥನೆ. ಬಿತ್ತಿದ ಬೆಳೆಗಳು ಒಣಗುತ್ತಿದ್ದು,ದನಕರುಗಳಿಗೆ ಮೇವು ಇಲ್ಲ, ನೀರಿನ ಅಭಾವ,ಬೀಕರ ಬರಗಾಲ ಅದಕ್ಕಾಗಿ ಹಿಂದೆ ನಮ್ಮ ಪೂರ್ವಜರು ಮಳೆಗಾಗಿ ಅನೇಕ ಪೂಜೆ ಪುನಸ್ಕಾರ ಮಾಡುತ್ತಿದ್ದರು**



ಹಾಗೆ ಮಸ್ಕಿ ತಾಲ್ಲೂಕಿನ ಜಿನ್ನಾಪೂರ ಗ್ರಾಮದ ಮಹಿಳೆಯರು ಕಪ್ಪೆಯ ಮೊರೆ ಹೋಗಿದ್ದು,ಕಪ್ಪೆಯನ್ನು ಒಂದು ಡಬ್ಬಿಯಲ್ಲಿ ಇಟ್ಟು ಊರಿನ ಪ್ರತಿ ಮನೆ ಮನೆಗೂ ಹಾಡಿನೊಂದಿಗೆ ಧಾನ್ಯಗಳನ್ನು ಸಂಗ್ರಹಿಸಿ,ಮಾ–ರಿದ ನಂತರ ಬರುವ ಹಣದಿಂದ ಗ್ರಾಮದ ಎಲ್ಲಾ ಗುಡಿಗಳಿಗೆ ಪೂಜೆ ನೆರವೇರಿಸಿ ಊರಿಗೆ ಊಟ ಹಾಕಿಸಿ , ನಂತರ ಇಡಿ ರಾತ್ರಿ ಮಹಿಳೆಯರು ನಮ್ಮ ಸಂಸ್ಕಾರ ಸಂಪ್ರದಾಯ ಬಿಂಬಿಸುವ ಭಕ್ತಿ ಹಾಡುಗಳನ್ನು ಹಾಡಿ ದೇವರ ಪ್ರಾರ್ಥನೆ ಗೈಯುವ ಮೂಲಕ ಮಳೆ ಬರುತ್ತದೆ,ನಾಡು ಸಭೀಕ್ಷೆಯಾಗಿ ಉತ್ತಮ ಬೆಳೆ ಎಂಬ ನಂಬಿಕೆ ಇದೆ ಎಂದು ಯಲ್ಲಮ್ಮ ಹಳೆವೂರ,ಅಮರಮ್ಮ ಹಳೆವೂರ,ಹೊಳೆಯಮ್ಮ ಪೊ.ಪಾ, ದ್ರಾಕ್ಷಿಯಿನಿ , ಕಸ್ತೂರಿಮ್ಮ,ಚೊರಮ್ಮ,ದುರಗಮ್ಮ ಇನ್ನೂ ಇನ್ನಿತರರು ಹೇಳಿದರು.

## ರೈತರು ಬೆಳೆ ವಿಮೆ ಪ್ರಯೋಜನ ಪಡೆದುಕೊಳ್ಳಲಿ : ಶಾಸಕ ಮಾನಪ್ಪ ವಜ್ಜಲ್

❑ ನೈಜ್ಯ ದೆಸೆ ನ್ಯೂಸ್

**ಲಿಂಗಸಗೂರು: 2026–27ನೇ ಸಾಲಿನ ಮುಂಗಾರು ಹಂಗಾಮಿನ ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಭೀಮಾ (ಬೆಳೆ ವಿಮೆ) ಯೋಜನೆಯ ಪ್ರಯೋಜನವನ್ನು ತಾಲೂಕಿನ ಎಲ್ಲಾ ರೈತರು ಪಡೆದುಕೊಳ್ಳಬೇಕು ಎಂದು ಶಾಸಕ ಮಾನಪ್ಪ ವಜ್ಜಲ್ ಕರೆ ನೀಡಿದರು.**



ಪಟ್ಟಣದ ಕೃಷಿ ಇಲಾಖೆಯ ಆವರಣದಲ್ಲಿ ಆಯೋಜಿಸಿದ್ದ ಬೆಳೆ ವಿಮೆ ಜಾಗೃತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪ್ರಕೃತಿ ವಿಕೋಪ, ಅತಿವೃಷ್ಟಿ, ಅನಾವೃಷ್ಟಿ ಸೇರಿದಂತೆ ವಿವಿಧ ಕಾರಣಗಳಿಂದ ಬೆಳೆ ನಷ್ಟ ಸಂಭವಿಸಿದ ಸಂದರ್ಭದಲ್ಲಿ ರೈತರಿಗೆ ಆರ್ಥಿಕ ಭದ್ರತೆ ಒದಗಿಸುವ ಉದ್ದೇಶದಿಂದ ಸರ್ಕಾರ ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆಯನ್ನು ಜಾರಿಗೆ ತಂದಿದೆ. ತಾಲೂಕಿನ ರೈತರು ನಿಗದಿತ ಅವಧಿಯೊಳಗೆ ಬೆಳೆ ವಿಮೆ ನೋಂದಣಿ ಮಾಡಿಸಿಕೊಂಡು ಸರ್ಕಾರದ ಸೌಲಭ್ಯಗಳನ್ನು ಪಡೆದುಕೊಳ್ಳಬೇಕು ಎಂದು ತಿಳಿಸಿದರು.


ರೈತರು ಅಗತ್ಯ ದಾಖಲೆಗಳೊಂದಿಗೆ ಸಮೀಪದ ಕೃಷಿ ಇಲಾಖೆ, ರೈತ ಸಂಪರ್ಕ ಕೇಂದ್ರ ಅಥವಾ ಅಧಿಕೃತ ಸೇವಾ ಕೇಂದ್ರಗಳಿಗೆ ಭೇಟಿ ನೀಡಿ ಬೆಳೆ ವಿಮೆ ಮಾಡಿಸಿಕೊಳ್ಳುವಂತೆ ಮನವಿ ಮಾಡಿ, ಈ ಯೋಜನೆಯ ಸದುಪಯೋಗ ಪಡೆದು ತಮ್ಮ ಕೃಷಿಗೆ ಭದ್ರತೆ ಕಲ್ಪಿಸಿಕೊಳ್ಳಬೇಕೆಂದು ಹೇಳಿದರು. ಈ ಸಂದರ್ಭದಲ್ಲಿ ಕೃಷಿ ಉಪನಿರ್ದೇಶಕ ಮುತ್ತುರಾಜ, ಕೃಷಿ ಅಧಿಕಾರಿ ವಿಜಯಮೂರ್ತಿ, ಅಮರೇಗೌಡ, ಬಿಜೆಪಿ ಮಂಡಲ ಅಧ್ಯಕ್ಷ ಕೆ. ನಾಗಭೂಷಣ್, ಲಿಂಗಣ್ಣ ದೇವಿ ಕೇರಿ, ಮುದಕಪ್ಪ ನಾಯಕ, ಪಕ್ಷದ ಹಿರಿಯ ಮುಖಂಡರು, ಕೃಷಿ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿ ಹಾಗೂ ರೈತರು ಮತ್ತು ಕಾರ್ಯಕರ್ತರು ಇದ್ದರು.

## ಸಣಾಪುರ ವೀರಭದ್ರೇಶ್ವರ ಸೇರಿದಂತೆ ತಾಲ್ಲೂಕಿನಾದ್ಯಂತ ವಿವಿಧ ದೇವಸ್ಥಾನಗಳಲ್ಲಿ ವಿಶೇಷ ಪೂಜೆ ಹಾಗೂ ಮಳೆಗಾಗಿ ಪ್ರಾರ್ಥನೆ

❑ ನೈಜ್ಯ ದೆಸೆ ನ್ಯೂಸ್

**ಬಳ್ಳಾರಿ / ಕಂಪ್ಲಿ : ಸಣಾಪುರ ಗ್ರಾಮದ ಆರಾಧ್ಯ ದೇವರಾದ ಶ್ರೀ ಉದ್ಭವ ವೀರಭದ್ರೇಶ್ವರ ಸ್ವಾಮಿ ಸೇರಿದಂತೆ ಕಂಪ್ಲಿ ಪಟ್ಟಣ ಹಾಗೂ ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ ದೇವಸ್ಥಾನಗಳಲ್ಲಿ ದೇವರಿಗೆ ವಿವಿಧ ಅಬಿಷೇಕಗಳು,**

ವಿಶೇಷ ಅಲಂಕಾರಗಳು ಸೇ–ರಿದಂತೆ ಮಹಾಪೂಜೆಗಳು ನಡೆದವಲ್ಲದೆ ಮುಂಗಾರು ಮಳೆ ಕೈಕೊಟ್ಟಿದ್ದರಿಂದ ಮಳೆಗಾಗಿ ವಿಶೇಷ ಪ್ರಾರ್ಥನೆಗಳು ಶ್ರದ್ಧೆ,ಭಕ್ತಿ ಸಡಗರ ಸಂಭ್ರಮಗಳಿಂದ ಜರುಗಿದವು. ಸಣಾಪುರ ಗ್ರಾಮದ ಲಿಂಗರೂಪದ ಶ್ರೀ ಉದ್ಭವ ವೀರಭದ್ರಸ್ವಾಮಿಗೆ ವಿವಿಧ ಅಭಿಷೇಕಗಳು. ಸಹಸ್ರ ಬಿಲ್ವಾರ್ಚನೆ ನಡೆಯಿತು. ಸ್ವಾಮಿಗೆ ಬೆಳ್ಳಿ, ಚಿನ್ನಾಭರಣಗಳಿಂದ ಹಾಗೂ ವಿವಿಧ ಹೂಗಳಿಂದ ಅಲಂಕರಿಸಿ



ಮಹಾಮಂಗಳಾರತಿ ಮಾಡಲಾಯಿತು. ದೇಗುಲದ ಆವರಣದಲ್ಲಿ ಸ್ಥಳೀಯರು, ಸೇರಿದಂತೆ ವಿವಿಧ ಗ್ರಾಮಗಳು, ವಿವಿಧ ಜಿಲ್ಲೆಗಳು ಮತ್ತು ಬೇರೆ ಬೇರೆ ರಾಜ್ಯಗಳಿಂದ ಆಗಮಿಸಿದ ಸಕಲ ಸದ್ಭಕ್ತರಿಗೆ ಅನ್ನಸಂತರ್ಪಣೆ ಜರುಗಿತು. ರಾತ್ರಿ ದೇವಸ್ಥಾನದ ಆವರಣದಲ್ಲಿ ಸ್ವಾಮಿಯ ಕಿರು ರಥೋತ್ಸವ ಹಾಗೂ ಭಜನಾ ಕಾರ್ಯಕ್ರಮಗಳು ಜರುಗಿದ ನಂತರ ರಾತ್ರಿಯೂ ಭಕ್ತ–ರಿಗೆ ಅನ್ನಸಂತರ್ಪಣೆ ನಡೆಯಿತು.

ಪಟ್ಟಣದ ಶ್ರೀಪೇಟೆ ಬಸವೇಶ್ವರ, ಕೂಲಿಕಟ್ಟೆ ಬಸವೇಶ್ವರ,ದೇವಾಂಗ ಸಮಾಜದ ರಾಮಲಿಂಗೇಶ್ವರ, ಐತಿಹಾಸಿಕ ಸೋಮೇಶ್ವರ, ಸಕ್ಕರೆ ಕಾರ್ಖಾನೆಯ ಮುಕ್ತಿ ನಾಥೇಶ್ವರ ಹಾಗೂ ತಾಲ್ಲೂಕಿನ ವಿವಿಧ ಗ್ರಾಮಗಳ ದೇವಸ್ಥಾನಗಳಲ್ಲಿ ವಿಶೇಷ ಪೂಜೆ ಜರುಗಿದರೆ, ಕಂಪ್ಲಿ ಕೋಟೆಯ ಐತಿಹಾಸಿಕ ಪಂಪಾಪತಿ ದೇವಸ್ಥಾನದಲ್ಲಿ ವಿಶೇಷ ಪೂಜೆ ಹಾಗೂ ಅನ್ನಸಂತರ್ಪಣೆ ಮತ್ತು ಪಟ್ಟಣದ ವಿನಾಯಕ ನಗರದ ಗೌಸದ್ರ ಮಾರೆಮ್ಮ ದೇವಸ್ಥಾನದಲ್ಲಿ ವಿಶೇಷ ಪೂಜೆ ಮತ್ತು ಅನ್ನಸಂತರ್ಪಣೆ ನಡೆಯಿತು.

## "ಹಾಲಾಪುರದಲ್ಲಿ ನೀರಿಗಾಗಿ ಆಹಾಕಾರ" ಸಾರ್ವಜನಿಕರು ಹಣ ಸಂಗ್ರಹಿಸಿ ಪೈಪೈನ್ ದುರಸ್ತಿ ಮಾಡಿದ್ದಾರೆ.

❑ ನೈಜ್ಯ ದೆಸೆ ನ್ಯೂಸ್

**ಮಸ್ಕಿ: ತಾಲೂಕಿನ ಹಾಲಾಪುರ ಗ್ರಾಮ ಪಂಚಾಯಿತಿ ಆಟಕ್ಕುಂಟು ಲೆಕ್ಕಕ್ಕಿಲ್ಲದಾಗಿದೆ. ಕುಡಿಯುವ ನೀರಿಗಾಗಿ ಕೇಂದ್ರ, ರಾಜ್ಯ ಸರ್ಕಾರ ಹಾಗೂ ಜಿಲ್ಲಾ, ತಾಲೂಕು ಪಂಚಾಯಿತಿಯಲ್ಲಿ ಜನಪ್ರತಿನಿಧಿಗಳು, ಅಧಿಕಾರಿಗಳು ಸೇರಿ ಸಭೆಗಳ ಮೇಲೆ ಸಭೆ ಮಾಡಿದರೂ ಅಧಿಕಾರಿಗಳ ಎಡುವಟ್ಟು ಲೋಪದೋಷದಿಂದ ನೀರಿನ ಭವಣೆ ಹೇಳುತ್ತಿರದಾಗಿದೆ.**

ಕುಡಿಯುವ ನೀರಿಗಾಗಿ ಸರ್ಕಾರ ಕೋಟಿ ಕೋಟಿ ಹಣ ಮಿಸಲಿಟ್ಟರು ಅದು ರಾಜಕಾರಣಿಗಳು ಹಾಗೂ ಅಧಿಕಾ–ರಿಗಳ ಲೂಟಿ ಸೀಮಿತವಾಗಿದೆ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದರು. ಮಸ್ಕಿ ತಾಲೂಕು ಹಾಲಾಪುರ ಗ್ರಾಮ ಪಂಚಾಯಿತಿಯಲ್ಲಿ ಕುಡಿಯುವ ನೀರಿನ ಆಹಕಾರ ಹೇಳತೀರದು ಕಳೆದ ಮೂರು ದಿನಗಳಿಂದ ಇಲ್ಲಿ ಕುಡಿಯುವ ನೀರಿನ ಪೈಪುಗಳ ದುರಸ್ತಿಯಿಂದ ಶುದ್ಧ ಕುಡಿಯುವ




ನೀರು, ದಿನಬಳಕೆ ನೀರು, ಶಾಲೆಗಳಲ್ಲಿ ಮಕ್ಕಳಿಗೆ ಬಿಸಿಯೂಟಕ್ಕೆ ನೀರು ಇಲ್ಲದಾಗಿದೆ. ಇನ್ನಿತರ ನೀರಿನ ಸಮಸ್ಯೆಯಿಂದ ಜನರು ಬೇಸತ್ತು ಹೋಗುತ್ತಿದ್ದು ಸಮಸ್ಯೆ ಹೇಳುತ್ತಿರದಾಗಿದೆ.


ಆದರೆ ಗ್ರಾಮ ಪಂಚಾಯತಿ ಅಧಿಕಾರಿಗಳು ಸಿಬ್ಬಂದಿಯವರು ಪೈಪ್ ದುರಸ್ತಿ ಮಾಡಲು ಸಾಮಾನುಗಳಿಲ್ಲ, ಇಲ್ಲಿಯ ವಾಟರ್ ಮ್ಯಾನ್ ವರ್ಷವಾದರೂ ವೇತನ ಇಲ್ಲ ಎಂದು ಗೋಳಾಟ ತೋಡಿಕೊಂಡರು. ಅದಕ್ಕೆ ಜನರೇ ಸೇರಿ ತಲಾಪಟ್ಟಿ ಸಂಗ್ರಹ ಮಾಡಿ ಕುಡಿಯುವ ನೀರಿನ ಪೈಪೈನ್ ದುರಸ್ತಿ ಮಾಡಿದ್ದಾರೆ. ನಮ್ಮ ಹಾಲಾಪೂರ ನೀರು ಬೇರೆ ಬೇರೆ ಊರುಗಳಿಗೆ ಹೋಗುತ್ತವೆ. ಆದರೆ ಇಂದು ನಮ್ಮ ಊರಿಗೆ ನೀರೇ ಇಲ್ಲದಾಗಿದೆ. ಬೇರೆ ಊರಿಗೆ ಹೋಗಬೇಕಾದ ಪರಿಸ್ಥಿತಿ ಬಂದಿದೆ.

ಇದಕ್ಕೆ ಕ್ಯಾರೆ ಎನ್ನದೆ ಇಲ್ಲಿಯ ಗ್ರಾಮ ಪಂಚಾಯಿತಿ ಆಟಕ್ಕುಂಟು ಲೆಕ್ಕಕ್ಕಿಲ್ಲ ಎಂದು ಸಾರ್ವಜನಿಕರು ಗ್ರಾಮ ಪಂಚಾಯತಿ ಅಧಿಕಾರಿಗಳ ವರ್ತನೆಗೆ ಹಿಡಿ ಶಾಪ ಹಾಕಿ ಆಕ್ರೋಶ ವ್ಯಕ್ತಪಡಿಸಿದರು.

## ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಭೇಟಿ: ರಾಜ್ಯದ ರಾಜಕೀಯ ಬೆಳವಣಿಗೆ, ಪಕ್ಷ ಸಂಘಟನೆ ಮತ್ತು ಅಭಿವೃದ್ಧಿ ಕುರಿತು ಸುದೀರ್ಘ ಚರ್ಚೆ

❑ ನೈಜ್ಯ ದೆಸೆ ನ್ಯೂಸ್

**ನವದೆಹಲಿ: ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ರಾಷ್ಟ್ರೀಯ ಅಧ್ಯಕ್ಷರಾದ ಮಾನ್ಯ ಶ್ರೀ ಮಲ್ಲಿಕಾರ್ಜುನ ಖರ್ಗೆ ಅವರನ್ನು ಇಂದು ನವದೆಹಲಿಯಲ್ಲಿರುವ ಅವರ ನಿವಾಸದಲ್ಲಿ ಕರ್ನಾಟಕದ ಹಿರಿಯ ಕಾಂಗ್ರೆಸ್ ಮುಖಂಡರ ನಿಯೋಗ ಸೌಹಾರ್ದಯುತವಾಗಿ ಭೇಟಿ ಮಾಡಿ, ರಾಜ್ಯದ ಪ್ರಸ್ತುತ ರಾಜಕೀಯ ಪರಿಸ್ಥಿತಿ, ಪಕ್ಷ ಸಂಘಟನೆ, ಜನಪರ ಆಡಳಿತ ಹಾಗೂ ಮುಂದಿನ ರಾಜಕೀಯ ಕಾರ್ಯತಂತ್ರಗಳ ಕುರಿತು ಮಹತ್ವದ ಸಮಾಲೋಚನೆ ನಡೆಸಿತು.**



ಈ ನಿಯೋಗದಲ್ಲಿ ಮಾಜಿ ಸಚಿವರಾದ ಶ್ರೀ ಎನ್. ಎಸ್. ಬೋಸುರಾಜ್, ಸಂಸದರಾದ ಶ್ರೀ ಜಿ. ಕುಮಾರ್ ನಾಯಕ್, ಶಾಸಕರಾದ ಶ್ರೀ ಹಂಪಯ್ಯ ನಾಯಕ ಹಾಗೂ ಶ್ರೀ ಆರ್. ಬಸನಗೌಡ ತುರ್ವಿಹಾಳ, ಮಾಜಿ ಶಾಸಕರಾದ ಶ್ರೀ ಡಿ. ಎಸ್. ಹುಲಗೇರಿ, ಹಿರಿಯ ಕಾಂಗ್ರೆಸ್ ಮುಖಂಡರಾದ ಶ್ರೀ ಮೊಹಮ್ಮದ್ ಶಾಲಂ, ಶ್ರೀ ರಾಜಶೇಖರ ನಾಯಕ ಮತ್ತು ಶ್ರೀ ಬಸನಗೌಡ ಬಾದರ್ಲಿ ಉಪಸ್ಥಿತರಿದ್ದರು.

ಭೇಟಿಯ ವೇಳೆ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷದ ಸಂಘಟನೆಯನ್ನು ಇನ್ನಷ್ಟು ಬಲಿಷ್ಠಗೊಳಿಸುವುದು, ಬೂತ್ ಮಟ್ಟದಿಂದ ಜಿಲ್ಲಾ ಮಟ್ಟದವರೆಗೆ ಸಂಘಟನಾ ಚಟುವಟಿಕೆಗಳಿಗೆ ವೇಗ ನೀಡುವುದು, ಹೊಸ ಕಾರ್ಯಕರ್ತರನ್ನು ಪಕ್ಷಕ್ಕೆ ಸೇರ್ಪಡೆಗೊಳಿಸುವುದು ಹಾಗೂ ಯುವಕರು, ಮಹಿಳೆಯರು ಮತ್ತು ಎಲ್ಲಾ ಸಮುದಾಯಗಳ ಸಕ್ರಿಯ ಭಾಗವಹಿಸುವಿಕೆಯನ್ನು ಹೆಚ್ಚಿಸುವ ಕು–ರಿತು ಸಮಗ್ರ ಚರ್ಚೆ ನಡೆಯಿತು. ರಾಜ್ಯದ ಸಮಗ್ರ ಅಭಿವೃದ್ಧಿ, ರೈತರ ಹಿತಾಸಕ್ತಿ, ಯುವಜನತೆಗೆ ಉದ್ಯೋಗಾವಕಾಶ, ಶಿಕ್ಷಣ, ಆರೋಗ್ಯ, ನೀರಾವರಿ, ಮೂಲಸೌಕರ್ಯ ಅಭಿವೃದ್ಧಿ ಸೇ–ರಿದಂತೆ ಜನಸಾಮಾನ್ಯರ ಬದುಕಿಗೆ ಸಂಬಂಧಿಸಿದ ವಿವಿಧ ವಿಷಯಗಳ ಕುರಿತು ಮುಖಂಡರು ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು. ರಾಜ್ಯ ಸರ್ಕಾರದ ಜನಪರ ಯೋಜನೆಗಳು ಪ್ರತಿಯೊಬ್ಬ ಫಲಾನುಭವಿಗೂ ಪರಿಣಾಮಕಾ–ರಿಯಾಗಿ ತಲುಪುವಂತೆ ಪಕ್ಷದ ಸಂಘಟನೆ ಮತ್ತಷ್ಟು ಸಕ್ರಿಯವಾಗಬೇಕೆಂಬ ಅಭಿಪ್ರಾಯವೂ ವ್ಯಕ್ತವಾಯಿತು.

ಈ ಸಂದರ್ಭದಲ್ಲಿ ಎಐಸಿಸಿ ಅಧ್ಯಕ್ಷರಾದ ಶ್ರೀ ಮಲ್ಲಿಕಾರ್ಜುನ ಖರ್ಗೆ ಅವರು, ಕಾಂಗ್ರೆಸ್ ಪಕ್ಷದ ಶಕ್ತಿ ಅದರ ತಳಮಟ್ಟದ ಕಾರ್ಯಕರ್ತರು ಮತ್ತು ಜನರ ವಿಶ್ವಾಸದಲ್ಲಿದೆ ಎಂದು ತಿಳಿಸಿ, ಪ್ರತಿಯೊಬ್ಬ ಮುಖಂಡರೂ ಜನರೊಂದಿಗೆ ನಿರಂತರ ಸಂಪರ್ಕದಲ್ಲಿದ್ದು, ಅವರ ಸಮಸ್ಯೆಗಳಿಗೆ ಸ್ಪಂದಿಸುವ ಮೂಲಕ ಪಕ್ಷದ ಸಿದ್ಧಾಂತಗಳನ್ನು ಬಲಪಡಿಸಬೇಕು ಎಂದು ಕರೆ ನೀಡಿದರು. ರಾಜ್ಯದ ಅಭಿವೃದ್ಧಿ ಮತ್ತು ಸಾಮಾಜಿಕ ಸಾಮರಸ್ಯಕ್ಕೆ ಆದ್ಯತೆ ನೀಡುವ ರಾಜ–ಕೀಯವೇ ಕಾಂಗ್ರೆಸ್‌ನ ಮೂಲ ಧ್ಯೇಯವಾಗಿದ್ದು, ಅದನ್ನು ಜನರ ನಡುವೆ ಇನ್ನಷ್ಟು ಪರಿಣಾಮಕಾ–ರಿಯಾಗಿ ಕೊಂಡೊಯ್ಯುವಂತೆ ಸಲಹೆ ನೀಡಿದರು.

ಮುಖಂಡರು ಸಹ ರಾಜ್ಯದ ವಿವಿಧ ಜಿಲ್ಲೆಗಳ ರಾಜಕೀಯ ಬೆಳವಣಿಗೆಗಳು, ಸ್ಥಳೀಯ ಮಟ್ಟದ ಸಂಘಟನಾ ಬಲವರ್ಧನೆ ಹಾಗೂ ಮುಂಬರುವ ಚುನಾವಣಾ ಸಿದ್ಧತೆಗಳಿಗೆ ಸಂಬಂಧಿಸಿದ ವಿಚಾರಗಳನ್ನು ಖರ್ಗೆ ಅವರ ಗಮನಕ್ಕೆ ತಂದರು. ರಾಜ್ಯದ ಜನರ ಆಶೋತ್ತರಗಳಿಗೆ ತಕ್ಕಂತೆ ಪಕ್ಷ ಸಂಘಟನೆಯನ್ನು ಇನ್ನಷ್ಟು ಪರಿಣಾಮಕಾ–ರಿಯಾಗಿ ರೂಪಿಸುವ ಕುರಿತು ಹಲವು ಸಲಹೆ–ಸೂಚನೆಗಳು ಈ ಸಭೆಯಲ್ಲಿ ಚರ್ಚೆಗೆ ಬಂದವು. ಭೇಟಿಯ ಅಂತ್ಯದಲ್ಲಿ ಎಲ್ಲಾ ಮುಖಂಡರು ಎಐಸಿಸಿ ಅಧ್ಯಕ್ಷರಿಗೆ ಅಭಿನಂದನೆ ಸಲ್ಲಿಸಿ, ಪಕ್ಷದ ತತ್ವ–ಸಿದ್ಧಾಂತಗಳನ್ನು ಜನರ ನಡುವೆ ಮತ್ತಷ್ಟು ಪರಿಣಾಮಕಾರಿಯಾಗಿ ತಲುಪಿಸುವ ಸಂಕಲ್ಪ ವ್ಯಕ್ತಪಡಿಸಿದರು. ಈ ಭೇಟಿ ಕರ್ನಾಟಕ ಕಾಂಗ್ರೆಸ್ ಸಂಘಟನೆಗೆ ಹೊಸ ಚೈತನ್ಯ ತುಂಬುವ ಮಹತ್ವದ ರಾಜಕೀಯ ಬೆಳವಣಿಗೆಯಾಗಿ ಪರಿಗಣಿಸಲಾಗುತ್ತಿದೆ.

## ಸಾಹಿತ್ಯ ಸಿಂಚನ

### ಯಶಸ್ಸು

ಯಶಸ್ಸು ಎಂಬುದು ಸುಲಭದ ಹಾದಿಯಲ್ಲ,
ಪರಿಶ್ರಮವೇ ಅದರ ನಿಜವಾದ ಬಲ.
ಕನಸು ಕಂಡ ಕಣ್ಣು ಗುರಿಯತ್ತ ಸಾಗಿದರೆ,
ಸಾಧನೆಯ ಶಿಖರವೇ ಕೈಗೆ ಸಿಗುತ್ತದೆ.

ಸೋಲು ಬಂದರೂ ಮನವು ಕುಗ್ಗಬಾರದು,
ಧೈರ್ಯದ ಹೆಜ್ಜೆ ಎಂದೂ ನಿಲ್ಲಬಾರದು.
ಪ್ರತಿ ವಿಫಲತೆಯೂ ಪಾಠವೊಂದನ್ನು ಕಲಿಸುತ್ತದೆ,
ಹೊಸ ಗೆಲುವಿನ ದಾರಿಯನ್ನು ತೋರಿಸುತ್ತದೆ.

ಬೆವರಿನ ಹನಿಯೇ ಯಶಸ್ಸಿನ ಬೀಜ,
ಶ್ರಮದ ಫಲವೇ ಜೀವನದ ತೇಜ.
ತಾಳ್ಮೆ, ನಂಬಿಕೆ ಜೊತೆಯಾದಾಗ,
ಅದೃಷ್ಟವೂ ಕೈಹಿಡಿದು ಸಾಗುತ್ತದೆ.

ಸತ್ಯದ ಹಾದಿಯಲ್ಲಿ ನಡೆದವರ ಹೆಸರು,
ಕಾಲ ಕಳೆದರೂ ಉಳಿಯುತ್ತದೆ ಚಿರಕಾಲವು.
ಯಶಸ್ಸು ಎಂದರೆ ಕೀರ್ತಿಯಷ್ಟೇ ಅಲ್ಲ,
ಒಳ್ಳೆಯ ಮನಸ್ಸಿನ ಗೆಲುವೇ ನಿಜವಾದ ಫಲ.

ಕನಸು ಕಾಣು, ಗುರಿಯ ಕಡೆ ನಡೆಯು,
ಪ್ರತಿ ದಿನ ಹೊಸ ಪ್ರಯತ್ನ ಮಾಡು.
ಯಶಸ್ಸು ದೂರದಲ್ಲಿಲ್ಲ ಎಂದಿಗೂ,
ದೃಢ ಸಂಕಲ್ಪವಿದ್ದರೆ ಅದು ನಿನ್ನದೇ ಆಗುವುದು.

–ಅಮರೇಶ

1ನೇ ಪುಟದಿಂದ....

ಯುವಕರು ಕಣ್ಣೀರು ಹಾಕಿ, ಪ್ರಾರ್ಥಿಸಿ ನನ್ನನ್ನು ಜೈಲಿಂದ ಹೊರಗೆ ಕರೆತಂದು ಈ ಸ್ಥಾನದಲ್ಲಿ ಕೂರಿಸಿದ್ದಾರೆ" ಎಂದರು.

ಪೆನ್ನು ಪೇಪರ್ ರಾಜ್ಯದ ಜನರಿಗೆ ಅವರ ಬದುಕಿಗೆ ಸೀಮಿತ "ನಾನು ರಾಜ್ಯದ ಜನರ ಆಶೀರ್ವಾದ ಕೇಳಿದೆ, ರಾಮನಗರ, ಚನ್ನಪಟ್ಟಣ, ಬಿಡದಿ, ಕನಕಪುರಕ್ಕೆ ಹೋದೆ. ನನಗೆ ಪೆನ್ನು ಪೇರ್ ಕೊಡಿ ಎಂದು ಕೇಳಿದೆ. ಅವರು ಕೊಟ್ಟಿದ್ದಾರೆ. ಈ ಪೆನ್ನು ಪೇಪರ್ ರಾಜ್ಯದ ಜನರಿಗೆ ಅವರ ಬದುಕಿಗೆ ಸೀಮಿತ. ಯಾರಿಗೂ ತೊಂದರೆ ಕೊಡುವ ತೀರ್ಮಾನ ಈ ಪೆನ್ನು ಪೇಪರ್ ನಿಂದ ಬರುವುದಿಲ್ಲ. ನನ್ನ ಜೀವ ಇರುವವರೆಗೂ ಈ ದೇಹ ರಾಜ್ಯದ ಜನತೆಗಾಗಿ ಮುಡಿಪಾಗಿ ಇಡುತ್ತೇನೆ. ಜನಪರ ಆಡಳಿತ ಕೊಟ್ಟು ರಾಜ್ಯದಲ್ಲಿ ಸಾಕ್ಷಿಗುಡ್ಡೆ ಬಿಡಬೇಕು. ನನ್ನ ಆಡಳಿತದಲ್ಲಿ ರಾಜ್ಯ ಸುಭೀಕ್ಷವಾಗಿರಬೇಕು ಎಂದು ಕೆಲಸ ಮಾಡುವುದು ನನ್ನ ಕರ್ತವ್ಯವಾಗಿದೆ. ನಿಮ್ಮ ಆಲೋಚನೆ ನನ್ನನ್ನು ಜೈಲಿಗೆ ಕಳುಹಿಸುವುದು" ಎಂದು ಹರಿಹಾಯ್ದರು. ಡಿಎಲ್ಎಫ್ ಗೆ ಟೆಂಡರ್ ನೀಡಿ ರಿಯಲ್ ಎಸ್ಟೇಟ್ ದಂಧೆ ಮಾಡಿದ್ದು ಯಾರು "ಕುಮಾರಸ್ವಾಮಿ ಅವರು ಮಾಡಲು ಮುಂದಾಗಿದ್ದ ಟೌನ್ ಶಿಪ್ ನಲ್ಲಿ ಇಡಿ ಹಳ್ಳಿಗಳು, ಅಲ್ಲಿ ಬದುಕು ಕಟ್ಟಿಕೊಂಡಿದ್ದವರ ಮನೆಗಳನ್ನು ಸೇರಿ ಎಲ್ಲರನ್ನು ಒಕ್ಕಲೆಬ್ಬಿಸಲು ಆದೇಶ ಹೊರಡಿಸಿದ್ದರು. ಅವರದೇ ಆದ ಪರಿಹಾರ ಮಾರ್ಗಸೂಚಿ ಹೊರಡಿಸಿದ್ದರು. ನಮ್ಮಣ್ಣ ಮಾತೆತ್ತಿದರೆ ಬಿಡದಿ ಟೌನ್ ಶಿಪ್ ಅನ್ನು ರಿಯಲ್ ಎಸ್ಟೇಟ್ ಎಂದು ಹೇಳುತ್ತಾರೆ. ಅವರು ಈ ಟೌನ್ ಶಿಪ್ ನಿರ್ಮಾಣವನ್ನು ರಿಯಲ್ ಎಸ್ಟೇಟ್ ಕಂಪನಿ ಡಿಎಲ್ಎಫ್ ಗೆ ಜವಾಬ್ದಾರಿ ನೀಡಿ ಅವರಿಂದ 400 ಕೋಟಿ ರೂ. ಹಣ ಕೂಡ ಕಟ್ಟಿಸಿಕೊಂಡಿದ್ದರು. ಕುಮಾರಸ್ವಾಮಿ ಅವರು ಅನಾರೋಗ್ಯದದಲ್ಲಿದ್ದರೂ ದೆಹಲಿಯಿಂದ ವಿಡಿಯೋ ಕಾನ್ಫರೆನ್ಸ್ ಮೂಲಕ ಮಾತನಾಡಿ ರೈತರಿಗೆ ಅಭಿವೃದ್ಧಿಪಡಿಸಿದ ಪ್ರದೇಶದಲ್ಲಿ 40% ಜಮೀನನ್ನು (ಪ್ರತಿ ಎಕರೆಗೆ ಸುಮಾರು 8 ಸಾವಿರ ಅಡಿ) ಪರಿಹಾರವಾಗಿ ನೀಡುವುದಾಗಿ ಹೇಳಿದ್ದಾರೆ. ಆಗ ಪ್ರತಿ ಎಕರೆಗೆ 22–25 ಲಕ್ಷ ಪರಿಹಾರ ನಿಗದಿ ಪಡಿಸಿದರು. ಈ ಬಗ್ಗೆ ಸರ್ಕಾರಿ ಆದೇಶ ಹೊರಡಿಸಿದ್ದರು" ಎಂದು ದಾಖಲೆ ಸಮೇತ ವಿವರಿಸಿದರು. "ಡಿಎಲ್ಎಫ್ ಸಂಸ್ಥೆಗೆ ಪತ್ರ ಬರೆದು ಭದ್ರತಾ ಠೇವಣಿ ಕಟ್ಟಬೇಕು, 15 ದಿನಗಳಲ್ಲಿ ಒಪ್ಪಂದ ಮಾಡಿಕೊಳ್ಳಬೇಕು ಎಂದು ಪತ್ರ ಬರೆದು ರಿಯಲ್ ಎಸ್ಟೇಟ್ ದಂಧೆ ಮಾಡಿದವನು ನಾನಾ ಅಣ್ಣಾ? 23–09–2006ರಲ್ಲಿ ಮುಖ್ಯಮಂತ್ರಿಯಾಗಿದ್ದ ನಮ್ಮ ಅಣ್ಣನವರ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಖಾಸಗಿ ಸಂಸ್ಥೆಯವರಿಗೆ ಈ ಜಮೀನನ್ನು ಹಂತ ಹಂತವಾಗಿ ಬಿಟ್ಟುಕೊಡಬೇಕು ಎಂದು ಸೂಚಿಸಿದ್ದರು. ಇದು ರಿಯಲ್ ಎಸ್ಟೇಟ್ ದಂಧೆ ಎಂದು ಕರೆಯಬೇಕಾ? ಕುಟುಂಬದ ದಂಧೆ ಎಂದು ಕರೆಯಬೇಕಾ? ರಿಯಲ್ ಎಸ್ಟೇಟ್ ದಂಧೆ ಮಾಡಿದ್ದು ಯಾರು ಅಪ್ಪಾಜಿ? ಈಗ ಯಾರ ಮೇಲೆ ಆರೋಪ ಮಾಡುತ್ತಿದ್ದೀರಾ? ಯಾವ ಕಾರಣಕ್ಕೆ ಹೋರಾಟ ಮಾಡುತ್ತಿದ್ದೀರಾ? ಯಾವ ರೈತರನ್ನು ಬಳಸಿಕೊಂಡು ಹೋರಾಟ ಮಾಡುತ್ತಿದ್ದೀರಾ?" ಎಂದು ಪ್ರಶ್ನಿಸಿದರು.

## ರಾಯಚೂರು ಪೊಲೀಸರ ಭರ್ಜರಿ ಕಾರ್ಯಾಚರಣೆ: ಬೈಕ್ ಕಳ್ಳರ ಬಂಧನ 3.60 ಲಕ್ಷ ಮೌಲ್ಯದ ಎರಡು ರಾಯಲ್ ಎನ್‌ಫೀಲ್ಡ್ ಬೈಕ್‌ಗಳ ವಶ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಸಾರ್ವಜನಿಕರ ಆಸ್ತಿಯ ರಕ್ಷಣೆ ಹಾಗೂ ಅಪರಾಧ ನಿಯಂತ್ರಣಕ್ಕೆ ಆದ್ಯತೆ ನೀಡಿರುವ ರಾಯಚೂರು ಜಿಲ್ಲಾ ಪೊಲೀಸ್ ಇಲಾಖೆ ಮತ್ತೊಂದು ಮಹತ್ವದ ಯಶಸ್ಸು ದಾಖಲಿಸಿದೆ. ಪಶ್ಚಿಮ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದ ಬೈಕ್ ಕಳವು ಪ್ರಕರಣವನ್ನು ಅತ್ಯಂತ ಕಡಿಮೆ ಅವಧಿಯಲ್ಲಿ ಭೇದಿಸಿರುವ ಪೊಲೀಸರು ಇಬ್ಬರು ಆರೋಪಿಗಳನ್ನು ಬಂಧಿಸಿ, ಸುಮಾರು ?3.60 ಲಕ್ಷ ಮೌಲ್ಯದ ಎರಡು ರಾಯಲ್ ಎನ್‌ಫೀಲ್ಡ್ (ಬ್ಲಾಕ್) ಮೋಟಾರ್‌ಸೈಕಲ್‌ಗಳನ್ನು ವಶಪಡಿಸಿಕೊಂಡಿದ್ದಾರೆ.**

ಜುಲೈ 13, 2026ರಂದು ನಡೆದ ಬೈಕ್ ಕಳವು ಪ್ರಕರಣಕ್ಕೆ ಸಂಬಂಧಿಸಿದಂತೆ ಪಶ್ಚಿಮ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ ಜಿಲ್ಲಾ ಪೊಲೀಸ್ ಅಧೀಕ್ಷಕರ ಮಾರ್ಗದರ್ಶನದಲ್ಲಿ ವಿಶೇಷ ತನಿಖಾ



ತಂಡವನ್ನು ರಚಿಸಿ, ಸಿಸಿಟಿವಿ ದೃಶ್ಯಾವಳಿ, ತಾಂತ್ರಿಕ ಮಾಹಿತಿ, ಮೊಬೈಲ್ ಕರೆ ವಿವರಗಳು ಹಾಗೂ ಸ್ಥಳೀಯ ಮಾಹಿತಿ ಸಂಗ್ರಹಿಸಿ ತನಿಖೆ ನಡೆಸಲಾಯಿತು. ತನಿಖೆಯ ವೇಳೆ ಆರೋಪಿಗಳ ಚಲನವಲನವನ್ನು ಪತ್ತೆಹಚ್ಚಿದ ಪೊಲೀಸರು ಕಾರ್ಯಾಚರಣೆ ನಡೆಸಿ ಇಬ್ಬರನ್ನು ಬಂಧಿಸಿದರು. ಬಂಧಿತರಿಂದ ಕಳುವಾಗಿದ್ದ ಎರಡು ರಾಯಲ್ ಎನ್‌ಫೀಲ್ಡ್ ಬೈಕ್‌ಗಳನ್ನು ವಶಪಡಿಸಿಕೊಳ್ಳಲಾಗಿದ್ದು, ಅವುಗಳ ಒಟ್ಟು ಮೌಲ್ಯ ಸುಮಾರು 3,60,000 ಎಂದು ಅಂದಾಜಿಸಲಾಗಿದೆ. ಈ ಮೂಲಕ ವಾಹನ ಕಳವು ಪ್ರಕರಣವನ್ನು ಯಶಸ್ವಿಯಾಗಿ ಭೇದಿಸಲಾಗಿದೆ.

ಪೊಲೀಸರ ಪ್ರಾಥಮಿಕ ವಿಚಾರಣೆಯಲ್ಲಿ ಆರೋಪಿಗಳು ವಿವಿಧ ಪ್ರದೇಶಗಳಲ್ಲಿ ವಾಹನ ಕಳವು ನಡೆಸಿರುವ ಸಾಧ್ಯತೆ ವ್ಯಕ್ತವಾಗಿದ್ದು, ಈ ಸಂಬಂಧ ಇನ್ನಷ್ಟು ತನಿಖೆ ಮುಂದುವರಿದಿದೆ. ಇತರೆ ಬಾಕಿ ಪ್ರಕರಣಗಳೊಂದಿಗೆ ಆರೋಪಿಗಳ ಸಂಪರ್ಕವಿದೆಯೇ ಎಂಬುದನ್ನು ಪೊಲೀಸರು ಪರಿಶೀಲಿಸುತ್ತಿದ್ದಾರೆ. ಈ ಯಶಸ್ವಿ ಕಾರ್ಯಾಚರಣೆಯಲ್ಲಿ ಪಶ್ಚಿಮ ಪೊಲೀಸ್ ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್, ತನಿಖಾಧಿಕಾರಿಗಳು ಹಾಗೂ ಸಿಬ್ಬಂದಿ ಪ್ರಮುಖ ಪಾತ್ರವಹಿಸಿದ್ದು, ಜಿಲ್ಲಾ ಪೊಲೀಸ್ ಅಧೀಕ್ಷಕರು ತಂಡದ ಕಾರ್ಯವನ್ನು ಶ್ಲಾಘಿಸಿ ಅಭಿನಂದಿಸಿದ್ದಾರೆ.

ಜಿಲ್ಲೆಯಲ್ಲಿ ವಾಹನ ಕಳವು ತಡೆಗಟ್ಟಲು ಪೊಲೀಸ್ ಇಲಾಖೆ ವಿಶೇಷ ನಿಗಾ ವಹಿಸಿದ್ದು, ಸಾರ್ವಜನಿಕರು ತಮ್ಮ ವಾಹನಗಳನ್ನು ಸುರಕ್ಷಿತ ಸ್ಥಳಗಳಲ್ಲಿ ನಿಲ್ಲಿಸುವುದು, ಹೆಚ್ಚುವರಿ ಭದ್ರತಾ ಲಾಕ್ ಅಳವಡಿಸುವುದು, ದಾಖಲೆಗಳನ್ನು ಸುರಕ್ಷಿತವಾಗಿಡುವುದು ಹಾಗೂ ಅನುಮಾನಾಸ್ಪದ ವ್ಯಕ್ತಿಗಳು ಅಥವಾ ಚಟುವಟಿಕೆಗಳು ಕಂಡುಬಂದಲ್ಲಿ ತಕ್ಷಣ 112 ಅಥವಾ ಸಮೀಪದ ಪೊಲೀಸ್ ಠಾಣೆಗೆ ಮಾಹಿತಿ ನೀಡುವಂತೆ ಮನವಿ ಮಾಡಲಾಗಿದೆ. ಕಳುವಾದ ವಾಹನಗಳನ್ನು ತ್ವರಿತವಾಗಿ ಪತ್ತೆಹಚ್ಚಿ ಆರೋಪಿಗಳನ್ನು ಬಂಧಿಸಿರುವುದು ರಾಯಚೂರು ಜಿಲ್ಲಾ ಪೊಲೀಸರ ದಕ್ಷತೆ ಮತ್ತು ಅಪರಾಧ ನಿಯಂತ್ರಣದ ಬದ್ಧತೆಗೆ ಸಾಕ್ಷಿಯಾಗಿದ್ದು, ಸಾರ್ವಜನಿಕರಿಂದ ಪೊಲೀಸ್ ಇಲಾಖೆಯ ಕಾರ್ಯಕ್ಕೆ ವ್ಯಾಪಕ ಮೆಚ್ಚುಗೆ ವ್ಯಕ್ತವಾಗಿದೆ.

# "ದೇವಿ" ಚಲನಚಿತ್ರ ಈ ವಾರ ತೆರೆಗೆ

ನೈಜ್ಯ ದೆಸೆ ನ್ಯೂಸ್

**ಬೆಂಗಳೂರು: ಸೂರ್ಯ ವಿಷನ್ ಬೆಂಗಳೂರ ಅವರ 'ದೇವಿ' ಸಾಮಾಜಿಕ ಕಾಳಜಿಯನ್ನೊಳಗೊಂಡ ಕನ್ನಡ ಚಲನಚಿತ್ರ ಈ ವಾರ ತೆರೆಕಾಣುತ್ತಿದೆ. ಚಲನಚಿತ್ರ ಜಗತ್ತಿನ ಮಾಯಾಲೋಕಕ್ಕೆ ಸಿಲುಕದವರೇ ಇಲ್ಲ. ಕೆಲವು ಪಾಲಕರಂತೂ ತಮ್ಮ ಮಗಳು ಅಥವಾ ಮಗ ನಾಯಕರಾಗಿ, ನಾಯಕಿಯಾಗಿ ತೆರೆಯ ಮೇಲೆ ಮಿಂಚಬೇಕು ಎಂಬ ಕನಸು ಕಂಡೇ ಕಾಣುತ್ತಾರೆ.**

ಹಾಗೆಯೆ ಬಡತನದಲ್ಲಿ ಬದುಕುತ್ತಿರುವ ರೇಣುಕಾಳಿಗೆ ತನ್ನ ಮಗಳು ಗೌರಿ ಸಿನಿಮಾದ ದೊಡ್ಡ ನಾಯಕಿಯಾಗಿ ಹೆಸರು, ಹಣ ಮತ್ತು ಗೌರವ ಗಳಿಸಬೇಕು ಎಂಬ ಕನಸು. ಅವಳ ದೃಷ್ಟಿಯಲ್ಲಿ ಸಿನಿಮಾ ಬದುಕಿನ ಸಂಕಟದಿಂದ ಮುಕ್ತಿ ಪಡೆಯುವ



ದಾರಿ. ಆದರೆ ಮಗಳು ಗೌರಿಯ ಮನಸ್ಸು ಬೇರೆ ದಿಕ್ಕಿನಲ್ಲಿ ಸಾಗುತ್ತದೆ. ಅವಳು ಓದಿ ವೈದ್ಯೆಯಾಗಿ ಸಮಾಜ ಸೇವೆ ಮಾಡಬೇಕು ಎಂಬ ಗಂಭೀರ ಕನಸು ಹೊಂದಿದ್ದಾಳೆ. ಮಗಳು ದೊಡ್ಡ ನಟಿಯಾಗಬೇಕು ಎನ್ನುವ ತಾಯಿಯ ಅತಿಯಾದ ಆಸೆ ಆಕೆಯನ್ನು ಸ್ಲಿಮ್ ಆಗಲು ಮಾಡುವ ಪ್ರಯತ್ನಗಳು, ಅದರ ಪರಿಣಾಮವಾಗಿ ಹುಡುಗಿಯ ಮನಸ್ಥಿತಿ ಹಾಗೂ ಹಾರ್ಮೋನು ಬದಲಾವಣೆಗಳಿಂದ ಉಂಟಾಗುವ ಕೋಪ–ದ್ವೇಷಗಳು ಕೊನೆಗೆ ಹೇಗೆ ಭಯಾನಕ ತಿರುವು ಪಡೆಯುತ್ತವೆ, ಪೋಷಕರ ಮಹತ್ವಾಕಾಂಕ್ಷೆ, ಅಂಧಭಕ್ತಿ, ಬಡತನ ಮತ್ತು ಬಾಲ್ಯದ ಹಕ್ಕುಗಳ ನಡುವಿನ ಸಂಘರ್ಷವನ್ನು ತೀವ್ರವಾಗಿ ಅನ್ವೇಷಿಸುವಂತೆ ಚಿತ್ರದಲ್ಲಿ ತೋರಿಸಲಾಗಿದೆ. "ಮಕ್ಕಳ ಕನಸುಗಳನ್ನು ಹಾಳುಮಾಡಬಾರದು; ಮಾಡಬಾರದನ್ನು ಮಾಡಿದರೆ ಆಗಬಾರದೇ ಆಗುತ್ತದೆ" ಎಂಬ ಕಠಿಣ ಸತ್ಯವನ್ನು ಈ ಚಿತ್ರ ಪ್ರತಿಧ್ವನಿಸುತ್ತದೆ.

ತಾರಾಗಣದಲ್ಲಿ ಛಾಯಾರಾಣಿ, ಧನಲಕ್ಷ್ಮಿ, ರಂಗನಾಥ ನಂಜನಗೂಡು, ಮಣಿಕಂಠ ಸೂರ್ಯ, ಸುಕುಮಾರ,ಪ್ರೀತಿ ಎಸ್ ಬಾಬು, ಕಾವೇರಿ ಶ್ರೀಧರ್ ,ವೀರೇಂದ್ರ ಬೆಳ್ಳಿಚುಕ್ಕಿ, ಕಾಳಿಪ್ರಸಾದ್ ಮೊದಲಾದವರಿದ್ದಾರೆ. ತಾಂತ್ರಿಕ ವರ್ಗ ಛಾಯಾಗ್ರಹಣ ವಿನಾಯಕ ರೇವಡಿ, ಸಂಗೀತ ಶಿವಸತ್ಯ, ಸಂಭಾಷಣೆ ಕೃಷ್ಣಪ್ರಸಾದ ಹಳೇಬೀಡು, ಚಿತ್ರಕಥೆ ಪೂರ್ಣೇಶ ಸಾಗರ, ವಸ್ತ್ರ ವಿನ್ಯಾಸ ವೀರೇಂದ್ರ ಬೆಳ್ಳಿಚುಕ್ಕಿ, ಸಂಕಲನ ಮುತ್ತುರಾಜ ಟಿ, ಕಲರಿಷ್ಟ್ ಸಚಿನ್ , ಪತ್ರಿಕಾ ಸಂಪರ್ಕ ಡಾ.ಪ್ರಭು ಗಂಜಿಹಾಳ, ಡಾ.ವೀರೇಶ ಹಂಡಿಗಿ ಅವರದಿದೆ. ಸಾಹಿತ್ಯ–ಕಥೆ–ನಿರ್ದೇಶನ ಕಾಳಿಪ್ರಸಾದ ನಿರ್ವಹಿಸಿದ್ದು, ಸಹನಿರ್ಮಾಪಕರು ಮಾರುತಿ ಎಂ, ವೀಣಾ ಎಂ ನಿರ್ಮಾಪಕರಾಗಿದ್ದಾರೆ. 'ದೇವಿ' ಬಾಲ್ಯದ ಸ್ವಾಯತ್ತತೆ ಮತ್ತು ಮಾನವೀಯ ಜವಾಬ್ದಾರಿಯ ಬಗ್ಗೆ ಜಾಗತಿಕ ಮಟ್ಟದಲ್ಲಿ ಚಿಂತನೆಗೆ ಆಹ್ವಾನ ನೀಡುವ ಗಾಢ, ಮನಕಲಕುವ ಸಿನೆಮಾ ಆಗಿದ್ದು ಮಕ್ಕಳ ಜೊತೆಗೆ ಪಾಲಕರು ನೋಡಲೇ ಬೇಕಾದ ಚಲನಚಿತ್ರವಾಗಿದೆ.

–ಡಾ.ಪ್ರಭು ಗಂಜಿಹಾಳ

## ಮೆಹಬೂಬ್ ಕಾಲೋನಿಯಲ್ಲಿ ರಾಷ್ಟ್ರೀಯ ಆಯುಷ್ ಅಭಿಯಾನದಡಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಯಶಸ್ವಿ

# ಉಚಿತ ಚಿಕಿತ್ಸೆ ಕೀಲು, ಮೂಳೆ ಹಾಗೂ ವಯೋಮಿತ್ರ ಆರೋಗ್ಯದ ಬಗ್ಗೆ ಜಾಗೃತಿ

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ರಾಷ್ಟ್ರೀಯ ಆಯುಷ್ ಅಭಿಯಾನದಡಿ ಸರಕಾರಿ ಯುನಾನಿ ಚಿಕಿತ್ಸಾಲಯ, ಸಿಂಧನೂರು ಹಾಗೂ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ (ಖಏಆಖಆಕ) ಸಹಯೋಗದಲ್ಲಿ ಮೆಹಬೂಬ್ ಕಾಲೋನಿಯಲ್ಲಿ ಆಯೋಜಿಸಿದ್ದ ಉಚಿತ ಆಯುಷ್ ಆರೋಗ್ಯ ತಪಾಸಣಾ ಶಿಬಿರ ಸಾರ್ವಜನಿಕರಿಂದ ಉತ್ತಮ ಸ್ಪಂದನೆ ಪಡೆದು ಯಶಸ್ವಿಯಾಗಿ ನಡೆಯಿತು.**

ಕೀಲು, ಮೂಳೆ ಸಂಬಂಧಿತ ಕಾಯಿಲೆಗಳು ಹಾಗೂ ವಯೋಮಿತ್ರ ಆರೋಗ್ಯದ ಕುರಿತು ಜಾಗೃತಿ ಮೂಡಿಸುವ ಉದ್ದೇಶದಿಂದ ಆಯೋಜಿಸಿದ್ದ ಈ ಶಿಬಿರದಲ್ಲಿ ಒಟ್ಟು 79 ಮಂದಿ ಫಲಾನುಭವಿಗಳು ಉಚಿತ ಆರೋಗ್ಯ ತಪಾಸಣೆ, ವೈದ್ಯಕೀಯ ಸಲಹೆ ಹಾಗೂ ಔಷಧೋಪಚಾರದ ಸೌಲಭ್ಯ ಪಡೆದರು. ಕಾರ್ಯಕ್ರಮವನ್ನು ಸಂಪ್ರದಾಯಬದ್ಧವಾಗಿ ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಭಾಸ್ಕರ್ ಎಂ ವಹಿಸಿದ್ದರು. ಖಏಆಖಆಕ ಜ್ಞಾನ ವಿಕಾಸ ವಿಭಾಗದ ಶ್ರೀಮತಿ ಸುಮಂಗಲ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಿರೂಪಿಸಿದರು. ಕೊನೆಯಲ್ಲಿ ಒಕ್ಕೂಟದ ಮೇಲ್ವಿಚಾರಕರಾದ ಶ್ರೀ ಬಸವರಾಜ ವಂದನಾರ್ಪಣೆ ಸಲ್ಲಿಸಿ, ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸಿದ ಎಲ್ಲರಿಗೂ ಕೃತಜ್ಞತೆ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಮೆಹಬೂಬ್ ಕಾಲೋನಿ ಒಕ್ಕೂಟದ ಅಧ್ಯಕ್ಷರಾದ ಶ್ರೀಮತಿ



ಸಂಗೀತ, ಶ್ರೀಮತಿ ಸುಮಂಗಲ ಹಾಗೂ ಖಏಆಖಆಕಯ ಇತರ ಪದಾಧಿಕಾರಿಗಳು ಭಾಗವಹಿಸಿದ್ದರು. ಸರಕಾರಿ ಯುನಾನಿ ಚಿಕಿತ್ಸಾಲಯದ ವೈದ್ಯಾಧಿಕಾರಿಗಳಾದ ಡಾ. ಅಮ್ಜದ್ ಶರೀಫ್, ಡಾ. ಫೌಝಿಯಾ ಬೇಗಂ, ಡಾ. ಡಿ. ಎಚ್. ಹುಲ್ಲೂರು, ಫಾರ್ಮಸಿ ಅಧಿಕಾರಿ ಭಾರ್ಗವ, ಶುಶ್ರೂಷಾಧಿಕಾರಿ ನಿಂಗಮ್ಮ ಹಾಗೂ ಸಿಬ್ಬಂದಿಗಳಾದ ವಿಶ್ವನಾಥ್ ಮತ್ತು ಖಲಂದರ್ ಶಿಬಿರದಲ್ಲಿ ಆರೋಗ್ಯ ಸೇವೆ ಒದಗಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಶ್ರೀ ಭಾಸ್ಕರ್ ಎಂ ಅವರು, ಇಂದಿನ ಜೀವನಶೈಲಿಯಿಂದ ಅನೇಕ ಆರೋಗ್ಯ ಸಮಸ್ಯೆಗಳು ಹೆಚ್ಚಾಗುತ್ತಿದ್ದು, ಜಂಕ್ ಆಹಾರ ಸೇವನೆಯನ್ನು ತ್ಯಜಿಸಿ ಪೌಷ್ಟಿಕ ಆಹಾರ, ನಿಯಮಿತ ವ್ಯಾಯಾಮ ಹಾಗೂ ಉತ್ತಮ ಜೀವನಶೈಲಿಯನ್ನು ಅಳವಡಿಸಿಕೊಳ್ಳುವಂತೆ ಸಾರ್ವಜನಿಕರಿಗೆ ಕರೆ ನೀಡಿದರು.

ಡಾ. ಅಮ್ಜದ್ ಶರೀಫ್ ಅವರು ಆಯುಷ್ ಚಿಕಿತ್ಸಾ ಪದ್ಧತಿಯ ವೈಜ್ಞಾನಿಕ ಮಹತ್ವವನ್ನು ವಿವರಿಸಿ, ಜೀವನಶೈಲಿ ಸಂಬಂಧಿತ ಕಾಯಿಲೆಗಳನ್ನು ನಿಯಂತ್ರಿಸಲು ಆಯುಷ್ ಚಿಕಿತ್ಸೆಗಳು ಪರಿಣಾಮಕಾರಿಯಾಗಿವೆ ಎಂದು ತಿಳಿಸಿದರು. ಆರೋಗ್ಯ ಕಾಪಾಡಿಕೊಳ್ಳಲು ನಿಯಮಿತ ಆರೋಗ್ಯ ತಪಾಸಣೆ ಅಗತ್ಯವೆಂದು ಅವರು ಸಲಹೆ ನೀಡಿದರು. ಡಾ. ಡಿ. ಎಚ್. ಹುಲ್ಲೂರು ಅವರು ಆಯುರ್ವೇದದಲ್ಲಿ ವಿವರಿಸಿರುವ ವಾತ, ಪಿತ್ತ ಮತ್ತು ಕಫ ದೇಹದ ಮೂಲ ತತ್ವಗಳಾಗಿದ್ದು, ಅವುಗಳ ಸಮತೋಲನ ಕಾಪಾಡಿಕೊಳ್ಳುವುದು ಆರೋಗ್ಯಕರ ಜೀವನಕ್ಕೆ ಅತ್ಯಂತ ಅಗತ್ಯ ಎಂದು ವಿವರಿಸಿದರು.

ಸಮತೋಲನ ಕಳೆದುಕೊಂಡಾಗ ವಿವಿಧ ರೋಗಗಳು ಕಾಣಿಸಿಕೊಳ್ಳುತ್ತವೆ ಎಂದು ತಿಳಿಸಿದರು. ಶಿಬಿರದಲ್ಲಿ ಸಾರ್ವಜನಿಕರಿಗೆ ರಕ್ತದೊತ್ತಡ (ಃಕ), ಮಧುಮೇಹ (ಖಣಂಚಿಡಿ) ಸೇರಿದಂತೆ ವಿವಿಧ ಆರೋಗ್ಯ ತಪಾಸಣೆಗಳನ್ನು ನಡೆಸಿ, ಅಗತ್ಯ ಔಷಧಗಳನ್ನು ಉಚಿತವಾಗಿ ವಿತರಿಸಲಾಯಿತು. ನಿರಂತರ ಚಿಕಿತ್ಸೆಯ ಅಗತ್ಯವಿರುವವರಿಗೆ ಸರಕಾರಿ ಯುನಾನಿ ಚಿಕಿತ್ಸಾಲಯಕ್ಕೆ ಭೇಟಿ ನೀಡಿ ಚಿಕಿತ್ಸೆ ಮುಂದುವರಿಸಿಕೊಳ್ಳುವಂತೆ ವೈದ್ಯರು ಸಲಹೆ ನೀಡಿದರು. ತೀವ್ರ ಆರೋಗ್ಯ ಸಮಸ್ಯೆ ಕಂಡುಬಂದ ಕೆಲವರಿಗೆ ಹೆಚ್ಚಿನ ಚಿಕಿತ್ಸೆಗಾಗಿ ತಾಲೂಕು ಸರಕಾರಿ ಆಸ್ಪತ್ರೆಗೆ ತೆರಳುವಂತೆ ಮಾರ್ಗದರ್ಶನ ನೀಡಲಾಯಿತು. ಶಿಬಿರದಲ್ಲಿ ಭಾಗವಹಿಸಿದ ಸಾರ್ವಜನಿಕರು ಉಚಿತ ಆರೋಗ್ಯ ಸೇವೆ, ವೈದ್ಯಕೀಯ ಸಲಹೆ ಮತ್ತು ಔಷಧೋಪಚಾರದಿಂದ ತೃಪ್ತಿ ವ್ಯಕ್ತಪಡಿಸಿದರು. ಗ್ರಾಮೀಣ ಹಾಗೂ ನಗರ ಪ್ರದೇಶದ ಜನರಿಗೆ ಆರೋಗ್ಯ ಸೇವೆಯನ್ನು ಮನೆ ಬಾಗಿಲಿಗೆ ತಲುಪಿಸುವ ಇಂತಹ ಕಾರ್ಯಕ್ರಮಗಳು ಸಮಾಜದ ಆರೋಗ್ಯ ಸುಧಾರಣೆಗೆ ಮಹತ್ವದ ಕೊಡುಗೆ ನೀಡುತ್ತಿವೆ ಎಂದು ಸಾರ್ವಜನಿಕರು ಅಭಿಪ್ರಾಯಪಟ್ಟರು. ಆಯೋಜಕರು ಮುಂದಿನ ದಿನಗಳಲ್ಲಿಯೂ ವಿವಿಧ ಪ್ರದೇಶಗಳಲ್ಲಿ ಇಂತಹ ಉಚಿತ ಆಯುಷ್ ಆರೋಗ್ಯ ಶಿಬಿರಗಳನ್ನು ಆಯೋಜಿಸಿ, ಆರೋಗ್ಯ ಜಾಗೃತಿ ಮತ್ತು ಗುಣಮಟ್ಟದ ವೈದ್ಯಕೀಯ ಸೇವೆಯನ್ನು ಜನರಿಗೆ ತಲುಪಿಸುವ ಸಂಕಲ್ಪ ವ್ಯಕ್ತಪಡಿಸಿದರು.

# ನದಿಯಲ್ಲಿ ನೀರು ಖಾಲಿ ಖಾಲಿ : ನೀರಿನ ದಾಹಕ್ಕಾಗಿ ಜನ ಜಾನುವಾರುಗಳ ಪರದಾಟ : ನೀರು ಹರಿಸುವಂತೆ ರೈತರ, ಜನರ ಆಗ್ರಹ, ಪ್ರತಿಭಟನೆಗೆ ಸಾಥ್ ನೀಡಿದ ಕುರಿಗಳು

ನೈಜ್ಯ ದೆಸೆ ನ್ಯೂಸ್

**ಬಳ್ಳಾರಿ / ಕಂಪ್ಲಿ : ನದಿಯಲ್ಲಿ ಬತ್ತಿದ ನೀರು. ಅಂತರ್ಜಲ ಕುಸಿತ. ಕುಡಿಯಲು ನೀರಿಲ್ಲ. ಎತ್ತ ನೋಡಿದರೂ ನೀರಿಲ್ಲ. ಆದ್ದರಿಂದ ನೀರಿನ ದಾಹ ನೀಗಿಸಿಕೊಳ್ಳಲು ಜನರು ಪರದಾಡುವ ಜೊತೆಗೆ ಮೂಕ ದನಕರುಗಳ, ಪ್ರಾಣಿ, ಪಕ್ಷಿಗಳ ರೋಧನೆ ಅಷ್ಟಿಷ್ಟಲ್ಲ. ಇಂತಹ ನೀರಿನ ಬವಣೆಗೆ ತತ್ತರಿಸಿದ ಜನರು ಕುಡಿಯುವ ನೀರು ಒದಗಿಸಬೇಕೆಂಬ ಹಕ್ಕೊತ್ತಾಯ ಮಾಡುತ್ತಿದ್ದಾರೆ.**

ಹೌದು..! ತಾಲೂಕಿನ ಸಣಾಪುರ ಗ್ರಾಪಂ ವ್ಯಾಪ್ತಿಯ ಇಟಗಿ ಗ್ರಾಮ ಬಳಿಯಲ್ಲಿ ಹಾದು ಹೋಗಿರುವ ತುಂಗಭದ್ರಾ ನದಿ ನೀರು ಬತ್ತಿರುವುದು ಜನ ಜಾನುವಾರುಗಳ ಆಕ್ರಂದದೊಂದಿಗೆ ಬೆಳೆಗಳು ಇಲ್ಲದಿದ್ದರೂ ನೀರನ್ನಾದರೂ ಕೊಡಿ ಸ್ವಾಮಿ ಎಂದು ಇಲ್ಲಿನ ರೈತರು ಮತ್ತು ಜನರು ಸರ್ಕಾರಕ್ಕೆ ಮತ್ತು ಅಧಿಕಾರಿಗಳಿಗೆ ಆಗ್ರಹಿಸಿದರು. ಇಲ್ಲಿನ ನದಿಯಲ್ಲಿ ನೀರಿಲ್ಲದಿರುವುದನ್ನು ಕಂಡ ಇಟಗಿ, ಸಣಾಪುರ, ನಂ.2 ಮುದ್ದಾಪುರ, ಮಣ್ಣೂರು ಸೂಗೂರು, ಕ್ಯಾಂಪ್‌ಗಳ ಜನರು ಕುಡಿಯಲು ನದಿಗೆ ನೀರು ಹರಿಸಬೇಕೆಂದು, ರೈತರು ಮತ್ತು ಜನರು ನದಿ ಸ್ಥಳದಲ್ಲಿ ಪ್ರತಿಭಟಿಸುವ ಮೂಲಕ ಒತ್ತಾಯಿಸಿದರು. ನಂತರ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ರಾಜ್ಯ ಕಾರ್ಯಾಧ್ಯಕ್ಷ ಬಿ.ವಿ.ಗೌಡ



ಮಾತನಾಡಿ, ತುಂಗಭದ್ರ ಜಲಾಶಯ ರೈತರ ಜೀವನಾಡಿಯಾಗಿದೆ. ಆದರೆ, ಕಂಪ್ಲಿ ತಾಲೂಕು ವ್ಯಾಪ್ತಿಯ ಇಟಗಿ ಬಳಿಯಲ್ಲಿರುವ ತುಂಗಭದ್ರಾ ನದಿಯಲ್ಲಿ ನೀರು ಸಂಪೂರ್ಣವಾಗಿ ಬತ್ತಿದೆ.

ಮತ್ತು ಈ ಬಾರಿ ಮಳೆ ಇಲ್ಲದ ಪರಿಣಾಮ ಅಂತರ್ಜಲ ಮಟ್ಟವೂ ಕ್ಷೀಣಿಸಿದೆ. ಇದರಿಂದ ಗ್ರಾಮಗಳಲ್ಲಿ ಕುಡಿಯುವ ನೀರಿನ ಬರ ಎದುರಾಗಿದೆ. ಜನರು ಮತ್ತು ಜಾನುವಾರುಗಳು ನೀರಿಗಾಗಿ ದಿನನಿತ್ಯ ಪರದಾಡುವಂತಾಗಿದೆ. ಒಂದೊಪ್ಪತ್ತು ಊಟ ಬಿಡಬಹುದು. ಆದರೆ, ಕುಡಿಯಲಿಕ್ಕೆ ನೀರಿಲ್ಲಂದರೆ ಬದುಕು ಕಷ್ಟವಾಗುತ್ತದೆ. ಈಗಾಗಲೇ ಮಲೆನಾಡಿನಲ್ಲಿ ಮಳೆಯಾದ ಹಿನ್ನಲೆ ತುಂಗಭದ್ರಾ ಜಲಾಶಯಕ್ಕೆ ಸುಮಾರು 20ಕ್ಕೂ ಹೆಚ್ಚು ಟಿಎಂಸಿಯಷ್ಟು ನೀರು ಸಂಗ್ರಹವಾಗಿದೆ. ಇದರಲ್ಲಿ ಒಂದಿಷ್ಟು ಟಿಎಂಸಿಯಷ್ಟು ನೀರನ್ನು ನದಿಗೆ ಹರಿಸಿದರೆ, ನದಿ ಭಾಗದ ಇಟಗಿ, ಸಣಾಪುರ ಮತ್ತು ಇತರೆ ಗ್ರಾಮಗಳ ಜನರಿಗೆ ಮತ್ತು ಜಾನುವಾರುಗಳಿಗೆ ಅನುಕೂಲದ ಜೊತೆಗೆ ನೀರಿನ ದಾಹ ನೀಗಿಸಲು ಸಾಧ್ಯ ಎಂದರು.

ತದನಂತರ ರೈತ ಮುಖಂಡ ಇಟಗಿ ಶರಣೇಗೌಡ ಮಾತನಾಡಿ, ಕಳೆದ ಬಾರಿ ಮುಂಗಾರು ಮಳೆಯಿಂದಾಗಿ ಜಲಾಶಯ ತುಂಬಿ, ನದಿ ಮತ್ತು ಕಾಲುವೆಗಳಿಗೆ ಅಪಾರ ಪ್ರಮಾಣದಷ್ಟು ನೀರು ಪೋಲಾಗಿತ್ತು. ಆದರೆ, ಈ ಸಲ ನದಿಗೆ ನೀರಿಲ್ಲದಂತಾಗಿದೆ. ಮಳೆ ಕೈಕೊಟ್ಟ ಪರಿಣಾಮ ರೈತರು ಕಂಗಾಲಾಗಿರುವುದು ಒಂದೆಡೆಯಾದರೆ, ಮತ್ತೊಂದೆಡೆ ಕುಡಿಲಿಕ್ಕಾದರೂ ನದಿಗೆ ನೀರು ಹರಿಸಬೇಕೆಂಬ ಒತ್ತಾಯ ಮಾಡಬೇಕಾಗಿದೆ. ಮಳೆ ಇಲ್ಲದ ಪರಿಣಾಮ ಅಂತರ್ಜಲ ಕುಸಿತದಿಂದ ಕುಡಿಯಲಿಕ್ಕೆ ನೀರಿಲ್ಲದಂತಾಗಿದೆ. ಒಂದೆರಡು ದಿನದಲ್ಲಿ ನದಿಗೆ ನೀರು ಹರಿಸದಿದ್ದರೆ, ಈ ಭಾಗದ ರೈತರೆಲ್ಲರೂ ಒಂದುಗೂಡಿ ಬಳ್ಳಾರಿ ಜಿಲ್ಲಾಧಿಕಾರಿ ಕಛೇರಿಗೆ ತೆರಳಿ, ಜಿಲ್ಲಾಧಿಕಾರಿಗೆ ಕುಡಿಯಲು ನೀರು ಬಿಡುಸುವಂತೆ ಮನವಿ ಮಾಡಲಾಗುವುದು. ಒಂದು ವೇಳೆ ಮನವಿಗೆ ಸ್ಪಂದಿಸದಿದ್ದಲ್ಲಿ ಮುಂದಿನ ದಿನದಲ್ಲಿ ಉಗ್ರ ಹೋರಾಟ ತಾಳುತ್ತದೆ ಎಂದರು.

ಈ ಸಂದರ್ಭದಲ್ಲಿ ರೈತ ಮುಖಂಡರಾದ ಎ.ನಾಗರಾಜಗೌಡ, ವೆಂಕಟರಾಮರಾಜು, ವೈ. ರಮಣಯ್ಯ, ಜಿ.ಈರಣ್ಣ, ರಾಮರಾಜು, ಕೃಷ್ಣಂರಾಜು, ವಿರೇಶ, ಅಚ್ಚುತ್ತರಾಯ್ ವರ್ಮ, ಕೆ.ರಘುರಾಮ್, ರಾಮಣ್ಣ, ಕೆ.ಚಂದ್ರಪ್ಪ, ಗುಂಡುರಾವ್, ನಾರಾಯಣಾಚಾರ್, ಎಂ.ಸತ್ಯಪ್ಪ, ಸಿದ್ದಲಿಂಗಪ್ಪಗೌಡ ಸೇರಿದಂತೆ ಇಟಗಿ, ಸಣಾಪುರ, ನಂ.2 ಮುದ್ದಾಪುರ, ಮಣ್ಣೂರು, ಕ್ಯಾಂಪ್ ಗಳ ರೈತರು ಮತ್ತು ಜನರಿದ್ದರು.

### ಪ್ರತಿಭಟನೆಗೆ ಸಾಥ್ ನೀಡಿದ ಕುರಿಗಳು

ಇಲ್ಲಿನ ನದಿ ತಟದಲ್ಲಿ ರೈತರು ಮತ್ತು ಗ್ರಾಮಗಳ ಜನರು ನೀರಿಗಾಗಿ ಪ್ರತಿಭಟನೆ ನಡೆಸಿದರು. ಆದರೆ, ಇಲ್ಲಿನ ಜನರ ರೋಧನೆ ಜೊತೆಗೆ ನೀರಿಗಾಗಿ ದಿನನಿತ್ಯದಲ್ಲಿ ಸಂಕಷ್ಟ ಅನುಭವಿಸುತ್ತಿರುವ 40ಕ್ಕೂ ಹೆಚ್ಚು ಕುರಿ(ಮೇಕೆಗಳು ಒಳಗೊಂಡಂತೆ)ಗಳು ಸಹ ನಮಗೂ ಕುಡಿಯಲು ನೀರು ಕೊಡಿ ಎಂದು ಮೂಕ ಕುರಿಗಳು ಪ್ರತಿಭಟನೆಯಲ್ಲಿ ಪಾಲ್ಗೊಂಡು ಸಾಥ್ ನೀಡಿರುವುದು ಕಂಡು ಬಂತು. ಮನುಷ್ಯ ಎಲ್ಲಿಯಾದರೂ ನೀರು ಹುಡಿಕಿಕೊಂಡು ಹೋಗಿ ದಾಹ ನೀಗಿಸಿಕೊಳ್ಳುತ್ತಾನೆ. ಆದರೆ, ಕುರಿಗಳಾದ ನಾವು ಎಲ್ಲೆಂತ ಹೋಗಿ ನೀರು ಕುಡಿಯಲಿಕ್ಕೆ ಆಗುತ್ತದೆ. ದೂರದ ಊರುಗಳಿಗೆ ಹೋಗಬೇಕೆಂದರೆ, ಕಳ್ಳ ಕಾಕರ ಭಯ. ಮತ್ತು ನಮ್ಮ ಮಾಲೀಕರು ಬಿಡುವುದಿಲ್ಲ. ಇಷ್ಟು ದಿನ ಇಲ್ಲಿನ ನದಿ ನೀರನ್ನೇ ಅವಲಂಭಿಸಿ ಜೀವನ ನಡೆಸುತ್ತಾ ಬಂದಿದ್ದೇವು. ಆದರೆ, ಈಗ ನದಿಯಲ್ಲಿ ನೀರು ಖಾಲಿಯಾಗಿದ್ದು, ನಮ್ಮ ಪಾಡು ಕಷ್ಟದ ಪಾಡಾಗಿದೆ. ಆದ್ದರಿಂದ ಇಲ್ಲಿ ನಡೆಸಿದ ರೈತರ ಮತ್ತು ಜನರ ಪ್ರತಿಭಟನೆಯನ್ನು ಸರ್ಕಾರ ಮತ್ತು ಅಧಿಕಾರಿಗಳು ಆಲಿಸಿ, ನೀರು ಹರಿಸಿದರೆ, ಮನುಷ್ಯರಿಗೂ ಮತ್ತು ನಮಗೂ ನೀರಿನ ದಾಹ ತಣಿಸಲು ಸಾಧ್ಯ ಎಂಬ ಅಳಲಾಗಿತ್ತು.

## ನೇಮಕಾತಿ ಪ್ರಕಟಣೆ

**2026 – 133 ವಿಜ್ಞಾನಿ–ಬಿ ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಜುಲೈ 15, 2026**

CERT-In ನೇಮಕಾತಿ 2026: 133 ವಿಜ್ಞಾನಿ–ಬಿ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಭಾರತೀಯ ಕಂಪ್ಯೂಟರ್ ತುರ್ತು ಪ್ರತಿಕ್ರಿಯೆ ತಂಡವು ಜುಲೈ 2026 ರ CERT-In ಅಧಿಕೃತ ಅಧಿಸೂಚನೆಯ ಮೂಲಕ ವಿಜ್ಞಾನಿ–ಬಿ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಅಖಿಲ ಭಾರತ ಸರ್ಕಾರದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 17–ಆಗಸ್ಟ್–2026 ರಂದು ಅಥವಾ ಮೊದಲು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು ಅಧಿಕೃತ ವೆಬ್‌ಸೈಟ್: cert-in.org.in


# ಯುಜಿಡಿ ಕಾರ್ಮಿಕರ ನಿಸ್ವಾರ್ಥ ಸೇವೆಗೆ ಗೌರವ ಸುರಕ್ಷತೆ, ಘನತೆ ಮತ್ತು ಕಲ್ಯಾಣಕ್ಕೆ ಪಾಲಿಕೆಯ ಬದ್ಧತೆ

❏ **ನೈಜ್ಯ ದೆಸೆ ನ್ಯೂಸ್**

**ರಾಯಚೂರು: ನಗರದ ಸ್ವಚ್ಛತೆ, ಸಾರ್ವಜನಿಕ ಆರೋಗ್ಯ ಸಂರಕ್ಷಣೆ ಹಾಗೂ ಪರಿಸರ ನೈರ್ಮಲ್ಯ ಕಾಪಾಡುವಲ್ಲಿ ಹಗಲಿರುಳು ಶ್ರಮಿಸುತ್ತಿರುವ ಒಳಚರಂಡಿ ಮತ್ತು ಸೆಪ್ಟಿಕ್ ಟ್ಯಾಂಕ್ (UGD) ಕಾರ್ಮಿಕರು, ತ್ಯಾಜ್ಯ ವಿಂಗಡಕರು, ಸ್ವಚ್ಛತಾ ಸಿಬ್ಬಂದಿ ಹಾಗೂ ನೈರ್ಮಲ್ಯ ನಿರೀಕ್ಷಕರ ಸೇವೆಯನ್ನು ಗೌರವಿಸುವ ಉದ್ದೇಶದಿಂದ ರಾಯಚೂರು ಮಹಾನಗರ ಪಾಲಿಕೆಯಲ್ಲಿ "ನಮಸ್ತೆ ದಿನ"*ವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು. 'ನಮಸ್ತೆ ದಿನ'ವು ನೈರ್ಮಲ್ಯ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುವ ಕಾರ್ಮಿಕರ ಅಮೂಲ್ಯ ಸೇವೆಯನ್ನು ಗುರುತಿಸುವುದರ ಜೊತೆಗೆ,**

ಅವರ ಘನತೆ, ಸುರಕ್ಷತೆ, ಸಾಮಾಜಿಕ ಸೇರ್ಪಡೆ ಹಾಗೂ ಕಾರ್ಮಿಕರ ಹಕ್ಕುಗಳ ಕುರಿತು ಸಮಾಜದಲ್ಲಿ ಜಾಗೃತಿ ಮೂಡಿಸುವ ಮಹತ್ವದ ದಿನವಾಗಿದೆ. ಈ ಹಿನ್ನೆಲೆಯಲ್ಲಿ ಪಾಲಿಕೆಯ ವತಿಯಿಂದ ವಿಶೇಷ ಕಾರ್ಯಕ್ರಮ ಆಯೋಜಿಸಿ, ಯುಜಿಡಿ ಕಾರ್ಮಿಕರ ಸೇವೆಯನ್ನು ಸ್ಮರಿಸಿ ಅವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಮಾತನಾಡಿದ ಅಧಿಕಾರಿಗಳು, ನಗರದ ಒಳಚರಂಡಿ ವ್ಯವಸ್ಥೆ ಸುಗಮವಾಗಿ ಕಾರ್ಯನಿರ್ವಹಿಸಲು ಹಾಗೂ ಸಾರ್ವಜನಿಕ ಆರೋಗ್ಯವನ್ನು ಕಾಪಾಡಲು ಯುಜಿಡಿ ಕಾರ್ಮಿಕರ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಪ್ರತಿಕೂಲ ಪರಿಸ್ಥಿತಿಗಳಲ್ಲಿಯೂ ತಮ್ಮ ಕರ್ತವ್ಯವನ್ನು ಪ್ರಾಮಾಣಿಕವಾಗಿ ನಿರ್ವಹಿಸುತ್ತಿರುವ ಅವರ ಸೇವೆ ಸಮಾಜಕ್ಕೆ ಮಾದರಿಯಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.





ಕಾರ್ಮಿಕರು ತಮ್ಮ ಕರ್ತವ್ಯ ನಿರ್ವಹಿಸುವ ವೇಳೆ ವೈಯಕ್ತಿಕ ಸುರಕ್ಷತಾ ಸಾಧನಗಳಾದ ಹೆಲ್ಮೆಟ್, ಕೈಗವಸು, ಸುರಕ್ಷತಾ ಬೂಟು, ಮಾಸ್ಕ್ ಮತ್ತು ಅನಿಲ ಪತ್ತೆ ಸಾಧನಗಳನ್ನು ಕಡ್ಡಾಯವಾಗಿ ಬಳಸುವಂತೆ ತಿಳಿಸಲಾಯಿತು. ಯಾವುದೇ ಸಂದರ್ಭದಲ್ಲೂ ಸುರಕ್ಷತಾ ಕ್ರಮಗಳನ್ನು ಪಾಲಿಸದೆ ಒಳಚರಂಡಿ ಅಥವಾ ಸೆಪ್ಟಿಕ್ ಟ್ಯಾಂಕ್‌ಗಳಿಗೆ ಇಳಿಯಬಾರದು ಎಂದು ಸೂಚಿಸಲಾಯಿತು. ಜೊತೆಗೆ ಕಾರ್ಮಿಕರ ಆರೋಗ್ಯ ತಪಾಸಣೆ, ಸುರಕ್ಷತಾ ತರಬೇತಿ ಹಾಗೂ ಸರ್ಕಾರದ ವಿವಿಧ ಕಲ್ಯಾಣ ಯೋಜನೆಗಳ ಪ್ರಯೋಜನಗಳನ್ನು ಪರಿಣಾಮಕಾರಿಯಾಗಿ ತಲುಪಿಸುವ ನಿಟ್ಟಿನಲ್ಲಿ ಮಹಾನಗರ ಪಾಲಿಕೆ ನಿರಂತರವಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ತಿಳಿಸಲಾಯಿತು.

ನಮಸ್ತೆ ದಿನಾಚರಣೆಯ ಅಂಗವಾಗಿ ರಾಯಚೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಸೇವೆ ಸಲ್ಲಿಸುತ್ತಿರುವ ಯುಜಿಡಿ ಕಾರ್ಮಿಕರನ್ನು ಅವರ ಸಮರ್ಪಿತ ಸೇವೆ, ಕರ್ತವ್ಯನಿಷ್ಠೆ ಮತ್ತು ಅತ್ಯುತ್ತಮ ಕಾರ್ಯನಿರ್ವಹಣೆಯನ್ನು ಗುರುತಿಸಿ ಸನ್ಮಾನಿಸಿ ಗೌರವಿಸಲಾಯಿತು. ಕಾರ್ಮಿಕರ ಕಲ್ಯಾಣ, ಸುರಕ್ಷತೆ ಹಾಗೂ ಗೌರವಯುತ ಬದುಕಿಗೆ ಮಹಾನಗರ ಪಾಲಿಕೆ ಸದಾ ಬದ್ಧವಾಗಿದೆ ಎಂದು ಅಧಿಕಾರಿಗಳು ಪುನರುಚ್ಚರಿಸಿದರು. ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆಯ ಸಹಾಯಕ ಕಾರ್ಯಪಾಲಕ ಅಭಿಯಂತರ ಶ್ರೀ ಭೀಮಾಶಂಕರ, ಘನ ತ್ಯಾಜ್ಯ ನಿರ್ವಹಣಾ (ಖಘಟ) ಪರಿಣಿತರಾದ ಶ್ರೀ ಮೊಹಮ್ಮದ್ ಶಫಿ, ನೈರ್ಮಲ್ಯ ಮೇಲ್ವಿಚಾರಕರು, ಯುಜಿಡಿ ಕಾರ್ಮಿಕರು, ಸ್ವಚ್ಛತಾ ಸಿಬ್ಬಂದಿ ಹಾಗೂ ಮಹಾನಗರ ಪಾಲಿಕೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ಉಪಸ್ಥಿತರಿದ್ದರು.

## ಕೆ.ಕರಿಯಪ್ಪ 60ನೇ ವರ್ಷದ ಜನ್ಮದಿನಾಚರಣೆ ಪ್ರಯುಕ್ತ ಗಂಜ್ ವರ್ತಕರಿಂದ ಪೂರ್ವಭಾವಿ ಸಭೆ

❏ **ನೈಜ್ಯ ದೆಸೆ ನ್ಯೂಸ್**

**ಸಿಂಧನೂರು: ಸಿಂಧನೂರು ವಿಧಾನಸಭಾ ಕ್ಷೇತ್ರದ ಭಾರತೀಯ ಜನತಾ ಪಾರ್ಟಿಯ ಹಿರಿಯ ಮುಖಂಡ ಕೆ.ಕರಿಯಪ್ಪ ಅವರ 60ನೇ ವರ್ಷದ ಜನ್ಮದಿನದ ಅಂಗವಾಗಿ ಜು.17 ಮತ್ತು 18 ರಂದು ವಿವಿಧ ಸಾಮಾಜಿಕ ಕಾರ್ಯಕ್ರಮದ ಜೊತೆಗೆ ಮಳೆ ಬಾರದ ಹಿನ್ನೆಲೆ ಸಂಕಷ್ಟಕ್ಕೊಳಗಾಗಿರುವ ರೈತರಿಗಾಗಿ ಮಹಾ ವರುಣ ಯಾಗ ಹಮ್ಮಿಕೊಳ್ಳಲಾಗಿದೆ ಈ ಕಾರ್ಯಕ್ರಮದ ನಿಮಿತ್ತವಾಗಿ ಇಂದು ಸಾಯಂಕಾಲ ನಗರದ ಎಪಿಎಂಸಿಯಲ್ಲಿ ಗಂಜ್ ವರ್ತಕರ ಸಂಘದಿಂದ ಕೆ.ಕರಿಯಪ್ಪ ಅವರ ಅಧ್ಯಕ್ಷತೆಯಲ್ಲಿ ಪೂರ್ವಭಾವಿ ಸಭೆ ನಡೆಯಿತು.**



ಈ ಸಮಯದಲ್ಲಿ ಗ್ಯಾನಪ್ಪ ಕನ್ನಾಂಪೇಟೆ, ಫಕೀರಪ್ಪ ತಿಡಿಗೋಳ ಸೇರಿದಂತೆ ಅನೇಕ ಗಂಜ್ ವರ್ತಕರು ಮಾತನಾಡಿ, ಕೆ.ಕರಿಯಪ್ಪ ಅವರ 60 ನೇ ವರ್ಷದ ಜನ್ಮದಿನದ ಪ್ರಯುಕ್ತ ಮತ್ತು ಮಳೆಗಾಗಿ ವಿಶೇಷ ಪ್ರಾರ್ಥನೆ ಮತ್ತು ಮಹಾ ವರುಣ ಯಾಗವನ್ನು ಹಮ್ಮಿಕೊಂಡು ರೈತರ ಹಿತ ಕಾಪಾಡುವ ದೃಷ್ಟಿಯಿಂದ ಕಾರ್ಯಕ್ರಮ ನಡೆಯುತ್ತಿದ್ದು, ಈ ಕಾರ್ಯಕ್ರಮದಲ್ಲಿ ಗಂಜ್ ವರ್ತಕರು ತಮ್ಮ ತನು, ಮನ, ಧನದ ಸಹಾಯದಿಂದ ಭಾಗಿಯಾಗಬೇಕೆಂದು ಮಾತನಾಡಿದರು. ನಂತರ ಕೆ.ಕರಿಯಪ್ಪ ಮಾತನಾಡಿ, ಎರಡನೇ ಬೆಳೆಗೆ ನೀರು ಬರಲಿಲ್ಲ ಈಗ ಮಳೆ ಬರುತ್ತಿಲ್ಲ ಈ ಕಾರಣವಾಗಿ ನನ್ನ ಜನ್ಮದಿನ ಆಚರಿಸುಕೊಳ್ಳುವುದು ಬೇಡ ಎಂದು ನಮ್ಮ ಕಾರ್ಯಕರ್ತರಿಗೆ ಮತ್ತು ಅಭಿಮಾನಿಗಳಿಗೆ ತಿಳಿಸಿದ್ದೆ ಆದರೆ ಅವರು ಎಲ್ಲರೂ ಸೇರಿಕೊಂಡು ನಿಮ್ಮ ಜನ್ಮದಿನ ಒಂದೇ ಅಲ್ಲ ರೈತರ ಒಳಿತಿಗಾಗಿ, ಮಳೆಗಾಗಿ ಮಹಾ ವರುಣ ಯಾಗ ಹಮ್ಮಿಕೊಳ್ಳೋಣ ಎಂದು ಒತ್ತಾಯ ಮಾಡಿದ ಮೇಲೆ ಒಪ್ಪಿಕೊಂಡಿದ್ದೇನೆ, ಈ ಕಾರ್ಯಕ್ರಮದಲ್ಲಿ 1 ಸಾವಿರಕ್ಕೂ ಹೆಚ್ಚು ಜನರಿಗೆ ಅಪಘಾತ ವಿಮೆ, ದಿನ ಪತ್ರಿಕೆ ಹಂಚುತ್ತಾ ವ್ಯಾಸಂಗ ಮಾಡುವ ಹುಡುಗರಿಗೆ ಸೈಕಲ್ ವಿತರಣೆ, ಸೇರಿದಂತೆ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಈ ಕಾರಣವಾಗಿ ತಾವು ಮುಂದೆ ನಿಂತು ನನ್ನನ್ನು ಬೆಂಬಲಿಸಿ ಕಾರ್ಯಕ್ರಮವನ್ನು ಯಶಸ್ವಿ ಮಾಡಿಕೊಡಬೇಕೆಂದು ಗಂಜ್ ವರ್ತಕರಲ್ಲಿ ಮನವಿ ಮಾಡಿದರು. ಈ ಸಂದರ್ಭದಲ್ಲಿ: ಗಂಜ್ ವರ್ತಕರಾದ ಲಕ್ಷ್ಮಣ, ಶಿವರಾಜ, ಫಕೀರಪ್ಪ ತಿಡಿಗೋಳ, ಮಲ್ಲಪ್ಪ ಮೈಲಾರ, ಶಿವಪುತ್ರಪ್ಪ, ನಾಗರಾಜ ಶ್ರೇಷ್ಠಿ, ಪಂಚಯ್ಯತಾತ, ಲಿಂಗರಾಜ, ಹನುಮೇಶ ಬಾಗೋಡಿ, ಕುಮಾರಪ್ಪ, ಕಿಚ್ಚಾ ಸುರೇಶ, ಲಿಂಗಪ್ಪ ಏಳುಕುರಿ, ಗ್ಯಾನಪ್ಪ, ದುರುಗಪ್ಪ ಹೊಸಳ್ಳಿ, ಟಿ.ಶಿವು, ವೀರೇಶ ಪುರ, ಚೈತ್ರ ಮಲ್ಲಪ್ಪ, ಗಾಳಿ ರಮೇಶ, ಬಸವರಾಜ ಗೊರೇಬಾಳ, ಅಮರೇಶ ಬಾಗೋಡಿ, ಗಂಗಣ್ಣ ಭಂಗಿ, ರಾಜು ನಾಯಕ, ಕೆಎಮ್ಎಸ್ ರಾಮು, ಮೌನೇಶ ಹೊಸಮನಿ, ಬಲಗೈ ಭಂಟ ಬೀರಪ್ಪ, ಮಂಜು ಮಾವಿನಮಡಗು, ಶಿವಶರಣಪ್ಪ, ರಂಗನಾಥ ಗೋಮರ್ಸಿ, ಗದ್ದೆಪ್ಪ, ಸೇರಿದಂತೆ ಅನೇಕ ಗಂಜ್ ವರ್ತಕರು ಇದ್ದರು.

# ಮದರಕಲ್ ಅಂಬಾ ಮಠದ ಜಾತ್ರಾ ಮಹೋತ್ಸವದ ಆಮಂತ್ರಣ ಪತ್ರಿಕೆ ಬಿಡುಗಡೆ



❏ **ನೈಜ್ಯ ದೆಸೆ ನ್ಯೂಸ್**

**ಅರಕೇರಾ: ತಾಲ್ಲೂಕಿನ ಮದರಕಲ್ ಗ್ರಾಮದ ಅವಧೂತ ರಾಜಯೋಗಿ ಸಂತ ನಾಮದೇವಗೌಡ ಶರಣರ ಅಂಬಾ ಮಠದಲ್ಲಿ ಗುರುಪೌರ್ಣಿಮೆಯ ಅಂಗವಾಗಿ ಹಮ್ಮಿಕೊಂಡಿರುವ 18ನೇ ವರ್ಷದ ಶರಣರ ಪಾದ ಪೂಜೆ, ಅನುಭವ ಕಾರ್ಯಕ್ರಮ ಹಾಗೂ ಜಾತ್ರಾ ಮಹೋತ್ಸವದ ಆಮಂತ್ರಣ ಪತ್ರಿಕೆಯ ಪೋಸ್ಟರ್ ಗಳನ್ನು ಬುಧವಾರ ಬಿಡುಗಡೆ ಮಾಡಲಾಯಿತು.**

ನಿವೃತ್ತ ತಹಶೀಲ್ದಾರ್ ವೆಂಕನಗೌಡ ಪಾಟೀಲ್ ಜಾತ್ರಾ ಮಹೋತ್ಸವದ ಕಾರ್ಯಕ್ರಮಗಳ ಕುರಿತು ಮಾಹಿತಿ ನೀಡಿ ಮಾತನಾಡಿದರು, ದಿನಾಂಕ 28-7-2026 ಮಂಗಳವಾರ ಬೆಳಿಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ತತ್ವಪದಗಳ ಅಖಂಡ ಭಜನಾ ಕಾರ್ಯಕ್ರಮ ಜರುಗಲಿದೆ. ದಿನಾಂಕ 29-07-2026 ರ ಬುಧವಾರ ಬೆಳಿಗ್ಗೆ 7.30 ರಿಂದ 10 ಗಂಟೆಯವರೆಗೆ ಗ್ರಾಮದ ಆಂಜನೇಯ ದೇವಸ್ಥಾನದಿಂದ ಶರಣ ನಾಮದೇವಗೌಡರ ಅಂಬಾ ಮಠದವರೆಗೆ ಸಕಲ ವಾದ್ಯ ಮೇಳಗಳೊಂದಿಗೆ ದೇವಿಯ ಭಾವಚಿತ್ರದೊಂದಿಗೆ ಕುಂಭ ಕಳಸಗಳ ಅದ್ಧೂರಿ ಮೆರವಣಿಗೆ ನಡೆಯಲಿದೆ.

ಅದೇ ದಿನ ಬೆಳಿಗ್ಗೆ 11 ಗಂಟೆಗೆ ಸಕಲ ಶರಣರ ಪಾದ ಪೂಜೆ ಕಾರ್ಯಕ್ರಮ, ಮಧ್ಯಾಹ್ನ 1 ಗಂಟೆಗೆ ಮಹಾ ಪ್ರಸಾದ, ಮಧ್ಯಾಹ್ನ 2 ರಿಂದ ಸಂಜೆ 4 ರವರೆಗೆ ಅನುಭವ ಕಾರ್ಯಕ್ರಮ ಹಾಗೂ ಸಂಜೆ 5.30ಕ್ಕೆ ಮಹಿಳೆಯರಿಂದ ಮಹಾರಥೋತ್ಸವ ಕಾರ್ಯಕ್ರಮವು ವಿಜೃಂಭಣೆಯಿಂದ ಜರುಗಲಿದೆ ಎಂದು ತಿಳಿಸಿದರು. ಇಲ್ಲಿ ನಡೆಯುವ ಜಾತ್ರೆಯು ಜಾತ್ಯಾತೀತವಾಗಿದೆ. ಮಠ ಹಾಗೂ ಜಾತ್ರೆ ಒಬ್ಬರಿಗೆ ಸೀಮಿತವಾದುದಲ್ಲ, ಇದು ಭಕ್ತರ ಮಠ. ಈ ನಾಡಿಗೆ ಸೇವೆ ಮಾಡಲು ಬಂದ ಶರಣರ ಆಶೀರ್ವಾದ ಎಲ್ಲರಿಗೂ ದೊರಕುವ ಸೌಭಾಗ್ಯ ಒದಗಿ ಬಂದಿದೆ. ಹೀಗಾಗಿ ಯಾವುದೇ ಭೇದ ಮಾಡದೆ ಪ್ರತಿಯೊಬ್ಬರು ಜಾತ್ರಾ ಮಹೋತ್ಸವದಲ್ಲಿ ಪಾಲ್ಗೊಂಡು ಆದಿ ಜಗನ್ಮಾತೆ ಅಂಬಾ ದೇವಿಯ ಕೃಪೆಗೆ ಪಾತ್ರರಾಗಬೇಕು ಎಂದು ಅವರು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಸಂತ ನಾಮದೇವಗೌಡ ಶರಣರು, ಸದಾಶಿವಪ್ಪ ತಾತ ಮುಂಡರಗಿ, ಮಾಜಿ ಜಿಪಂ ಸದಸ್ಯ ವೀರಣ್ಣ ಪಾಣಿ ಸಾಹುಕಾರ ಜಾಲಹಳ್ಳಿ, ಮಾಜಿ ಎಪಿಎಂಸಿ ಅಧ್ಯಕ್ಷ ರಾಮನಗೌಡ ಕರಡಿಗುಡ್ಡ, ಹಿರಿಯ ವಕೀಲರಾದ ವಿ.ಎಂ ಮೇಟಿ, ವೀರನಗೌಡ ಜಂಬಲದಿನ್ನಿ, ಸೋಮಲಿಂಗಪ್ಪಗೌಡ ಹೀರಾ, ಸಾಬಯ್ಯಗೌಡ ಪೊ.ಪಾ, ಬಂದಿಗಿ ಸಾಬ್, ಸಿದ್ದಪ್ಪಗೌಡ, ರಾಮುಲು ಬಸವ, ಅಂಬ್ರೇಶ ಪೋಪಾ, ಕರೆಪ್ಪ, ಅಯ್ಯನಗೌಡ, ಶಿವಪ್ಪ ಪಲಕನಮರಡಿ ಸೇರಿದಂತೆ ಮಠದ ಭಕ್ತರು ಗ್ರಾಮಸ್ಥರು ಉಪಸ್ಥಿತರಿದ್ದರು.

### ಜಾಲಹಳ್ಳಿ ಗ್ರಾಮ ಪಂಚಾಯಿತಿಗೆ ಜಿಲ್ಲಾ ಪಂಚಾಯಿತಿ ಸಿಇಒ ಈಶ್ವರ ಕುಮಾರ್ ಕಾಂದೂ ದಿಢೀರ್ ಭೇಟಿ;

# ಸಿಬ್ಬಂದಿಗೆ ತೀವ್ರ ತರಾಟೆ, ಕಳಪೆ ಕಾಮಗಾರಿಗಳ ವಿರುದ್ಧ ಕಠಿಣ ಎಚ್ಚರಿಕೆ

❏ **ನೈಜ್ಯ ದೆಸೆ ನ್ಯೂಸ್**

**ಜಾಲಹಳ್ಳಿ: ರಾಯಚೂರು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ (ಸಿಇಒ) ಈಶ್ವರ ಕುಮಾರ್ ಕಾಂದೂ ಅವರು ಬುಧವಾರ ಬೆಳಿಗ್ಗೆ ಜಾಲಹಳ್ಳಿ ಗ್ರಾಮ ಪಂಚಾಯಿತಿಗೆ ದಿಢೀರ್ ಭೇಟಿ ನೀಡಿ ಆಡಳಿತಾತ್ಮಕ ಕಾರ್ಯವೈಖರಿ, ಸಿಬ್ಬಂದಿಯ ಹಾಜರಾತಿ ಹಾಗೂ ಅಭಿವೃದ್ಧಿ ಕಾಮಗಾರಿಗಳನ್ನು ಪರಿಶೀಲಿಸಿದರು. ಈ ವೇಳೆ ಕರ್ತವ್ಯಕ್ಕೆ ಅನಧಿಕೃತವಾಗಿ ಗೈರಾಗಿದ್ದ ಪಿಡಿಒ, ಕಾರ್ಯದರ್ಶಿ ಹಾಗೂ ಸಿಬ್ಬಂದಿಯ ವಿರುದ್ಧ ತೀವ್ರ ಅಸಮಾಧಾನ ವ್ಯಕ್ತಪಡಿಸಿ, ಶಿಸ್ತು ಪಾಲನೆಗೆ ಕಟ್ಟುನಿಟ್ಟಿನ ಎಚ್ಚರಿಕೆ ನೀಡಿದರು.**

ಪಂಚಾಯಿತಿ ಕಚೇರಿಯ ದಾಖಲೆಗಳನ್ನು ಪರಿಶೀಲಿಸಿದ ಸಿಇಒ, ಅಗತ್ಯ ದಾಖಲಾತಿಗಳನ್ನು ತಕ್ಷಣ ಸಲ್ಲಿಸುವಂತೆ ಸಿಬ್ಬಂದಿಗೆ ಸೂಚಿಸಿದರು. ಪಿಡಿಒ ಹಾಗೂ ಕಾರ್ಯದರ್ಶಿ ಗೈರಾಗಿರುವ ಕುರಿತು ಪ್ರಶ್ನಿಸಿದಾಗ ಸಿಬ್ಬಂದಿ ನೀಡಿದ ಉತ್ತರದಿಂದ ಅಸಮಾಧಾನಗೊಂಡ ಅವರು, ಕರ್ತವ್ಯಲೋಪವನ್ನು ಯಾವುದೇ ಕಾರಣಕ್ಕೂ ಸಹಿಸಲಾಗುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಪರಿಶೀಲನೆ ವೇಳೆ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ (ಪಿಡಿಒ) ಲಕ್ಷ್ಮೀ ಅವರು ಕಚೇರಿಯಲ್ಲಿ ಇಲ್ಲದ ಕಾರಣ ದೂರವಾಣಿ ಮೂಲಕ ಸಂಪರ್ಕಿಸಿದ ಸಿಇಒ, "ನನ್ನ ವ್ಯಾಪ್ತಿಯಲ್ಲಿ ಎರಡು ಗ್ರಾಮ ಪಂಚಾಯಿತಿಗಳಿದ್ದು, ಇನ್ನೊಂದು ಪಂಚಾಯಿತಿಯಲ್ಲಿ ಕರ್ತವ್ಯದಲ್ಲಿದ್ದೇನೆ" ಎಂಬ



ಉತ್ತರ ಪಡೆದರು. ಆದರೂ ಸಾರ್ವಜನಿಕರಿಗೆ ತೊಂದರೆಯಾಗದಂತೆ ಕಚೇರಿ ವ್ಯವಸ್ಥೆ ಸಮರ್ಪಕವಾಗಿರಬೇಕು ಎಂದು ಸೂಚಿಸಿದರು. ಹಾಜರಾತಿ ಪುಸ್ತಕ ಪರಿಶೀಲಿಸಿದಾಗ ಬಹುತೇಕ ಸಿಬ್ಬಂದಿ ಗೈರಾಗಿರುವುದು ಕಂಡುಬಂದ ಹಿನ್ನೆಲೆಯಲ್ಲಿ ಸಿಇಒ ಅವರು ಹಾಜರಾತಿ ಪುಸ್ತಕವನ್ನು ವಶಪಡಿಸಿಕೊಂಡು, ಸಂಬಂಧಪಟ್ಟ ಎಲ್ಲ ಸಿಬ್ಬಂದಿಯೂ ಶುಕ್ರವಾರ ರಾಯಚೂರು ಜಿಲ್ಲಾ ಪಂಚಾಯಿತಿ ಕಚೇರಿಗೆ ಹಾಜರಾಗುವಂತೆ ಸೂಚಿಸಿದರು. ಕರ್ತವ್ಯಲೋಪ ಸಾಬೀತಾದರೆ ನಿಯಮಾನುಸಾರ ಕ್ರಮ ಕೈಗೊಳ್ಳುವುದಾಗಿ ಎಚ್ಚರಿಸಿದರು.

ಸಿಇಒ ಭೇಟಿ ವಿಚಾರ ತಿಳಿಯುತ್ತಿದ್ದಂತೆ ಗ್ರಾಮಸ್ಥರು ಪಂಚಾಯಿತಿ ಕಚೇರಿಗೆ ಆಗಮಿಸಿ ಕುಡಿಯುವ ನೀರು, ರಸ್ತೆ, ಚರಂಡಿ, ಸ್ವಚ್ಛತೆ, ಸಿಬ್ಬಂದಿಯ ಸಮಯಪಾಲನೆ ಸೇರಿದಂತೆ ಹಲವು ಸಮಸ್ಯೆಗಳನ್ನು ಪ್ರಸ್ತಾಪಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಸಿಇಒ, "ನಾನು ಸ್ವತಃ ವಾಸ್ತವ ಸ್ಥಿತಿಯನ್ನು ಗಮನಿಸಿದ್ದೇನೆ. ನಿರ್ಲಕ್ಷ್ಯ ತೋರಿದವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು" ಎಂದು ಭರವಸೆ ನೀಡಿದರು. ಈ ವೇಳೆ ಡಿವೈಎಫ್ಐ ಮುಖಂಡರು ಸಿಇಒ ಅವರನ್ನು ಭೇಟಿ ಮಾಡಿ ಕಳೆದ 14 ದಿನಗಳಿಂದ ವಿವಿಧ ಸಾರ್ವಜನಿಕ ಸಮಸ್ಯೆಗಳ ಕುರಿತು ಧರಣಿ ನಡೆಸಿದರೂ ಅಧಿಕಾರಿಗಳು ಸ್ಪಂದಿಸಿಲ್ಲ ಎಂದು ಆರೋಪಿಸಿ ಮನವಿ ಸಲ್ಲಿಸಿದರು. ಇದೇ ತಿಂಗಳ 20ರಂದು ರಸ್ತೆ ತಡೆ ಪ್ರತಿಭಟನೆ ನಡೆಸುವುದಾಗಿ ತಿಳಿಸಿದರು.

ಅಲ್ಲದೆ, ಕೆಕೆಆರ್‌ಡಿಬಿ ಇಲಾಖೆಯ ಕೆಲವು ಕಾಮಗಾರಿಗಳು ಅರ್ಧಕ್ಕೆ ಸ್ಥಗಿತಗೊಂಡಿರುವುದು, ಸುಮಾರು ?1 ಕೋಟಿ ವೆಚ್ಚದಲ್ಲಿ ನಿರ್ಮಿಸಿರುವ ಅಂಬೇಡ್ಕರ್ ವೃತ್ತದಿಂದ ರಂಗನಾಥ ದೇವಸ್ಥಾನದವರೆಗೆ ಸಿಸಿ ರಸ್ತೆ ಕಳಪೆ ಗುಣಮಟ್ಟದಲ್ಲಿ ನಿರ್ಮಾಣವಾಗಿರುವುದು, ಸಂತೆ ಮೈದಾನದ ಅತಿಕ್ರಮಣ ತೆರವುಗೊಳಿಸದಿರುವುದು ಹಾಗೂ 110/11 ಕೆವಿ ವಿದ್ಯುತ್ ಕಾಮಗಾರಿ ವಿಳಂಬವಾಗುತ್ತಿರುವ ಬಗ್ಗೆ ಗಮನ ಸೆಳೆದರು. ಈ ಕುರಿತು ತಕ್ಷಣವೇ ಕೆಕೆಆರ್‌ಡಿಬಿ ಇಲಾಖೆಯ ಎಇಇ ಹನುಮಂತ್ರಾಯ ನಾಯಕ ಅವರಿಗೆ ದೂರವಾಣಿ ಕರೆ ಮಾಡಿದ ಸಿಇಒ, ಕಾಮಗಾರಿಯನ್ನು ತಕ್ಷಣ ಆರಂಭಿಸಿ ಗುಣಮಟ್ಟದ ರೀತಿಯಲ್ಲಿ ಪೂರ್ಣಗೊಳಿಸಿ ವರದಿ ಸಲ್ಲಿಸುವಂತೆ ಸೂಚಿಸಿದರು. ಮತ್ತಷ್ಟು ನಿರ್ಲಕ್ಷ್ಯ ಕಂಡುಬಂದರೆ ಯಾವುದೇ ಮುಲಾಜಿಲ್ಲದೆ ಕಠಿಣ ಕ್ರಮ ಕೈಗೊಳ್ಳುವುದಾಗಿ ಎಚ್ಚರಿಕೆ ನೀಡಿದರು.

ಈ ಸಂದರ್ಭದಲ್ಲಿ ಶರಣಬಸವ ತಂದೆ ಬಸವರಾಜಪ್ಪ ವಟ್ಟಿ ಅವರು ತಮ್ಮ ಜಾಗದ ಸಮಸ್ಯೆ ಕುರಿತು ನಾಲ್ಕು ತಿಂಗಳ ಹಿಂದೆ ಪಂಚಾಯಿತಿಗೆ ಅರ್ಜಿ ಸಲ್ಲಿಸಿದ್ದರೂ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಸಿಇಒ ಅವರ ಗಮನಕ್ಕೆ ತಂದರು. ಇದಕ್ಕೆ ಅಸಮಾಧಾನ ವ್ಯಕ್ತಪಡಿಸಿದ ಸಿಇಒ, ಸಂಬಂಧಿಸಿದ ಸಿಬ್ಬಂದಿಯನ್ನು ತರಾಟೆಗೆ ತೆಗೆದುಕೊಂಡು ಎರಡು ದಿನಗಳೊಳಗೆ ಸಮಸ್ಯೆ ಬಗೆಹರಿಸಿ ವರದಿ ಸಲ್ಲಿಸುವಂತೆಸೂಚಿಸಿದರು. ಗ್ರಾಮ ಪಂಚಾಯಿತಿ ಪರಿಶೀಲನೆಯ ಬಳಿಕ ಸಿಇಒ ಅವರು ಜಾಲಹಳ್ಳಿಯ ಸಾರ್ವಜನಿಕ ಗ್ರಂಥಾಲಯಕ್ಕೂ ಭೇಟಿ ನೀಡಿ ಅದರ ನಿರ್ವಹಣೆ ಕುರಿತು ಮಾಹಿತಿ ಪಡೆದು ಇನ್ನಷ್ಟು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವಂತೆ ಸೂಚಿಸಿದರು.

ನಂತರ ಜಾಲಹಳ್ಳಿ ಕನ್ಯಾ ಪ್ರಾಥಮಿಕ ಶಾಲೆಯ ಕಿಶೋರಿ ಕೇಂದ್ರಕ್ಕೆ ದಿಢೀರ್ ಭೇಟಿ ನೀಡಿ ವಿದ್ಯಾರ್ಥಿನಿಯರೊಂದಿಗೆ ಸಮಾಲೋಚನೆ ನಡೆಸಿದರು. ಬಾಲ್ಯ ವಿವಾಹ ತಡೆ, ಶಿಕ್ಷಣದ ಮಹತ್ವ ಹಾಗೂ ಸ್ವಾವಲಂಬಿ ಜೀವನದ ಕುರಿತು ಅರಿವು ಮೂಡಿಸಿದ ಅವರು, ಸರ್ಕಾರದ ಸೌಲಭ್ಯಗಳನ್ನುಸದುಪಯೋಗಪಡಿಸಿಕೊಳ್ಳುವಂತೆ ಸಲಹೆ ನೀಡಿದರು. ಈ ಸಂದರ್ಭದಲ್ಲಿ ಆಪ್ತ ಸಮಾಲೋಚಕ ರಾಜೇಶ್ ದೇಶಪಾಂಡೆ, ಲಕ್ಷ್ಮಣ, ಮುಖ್ಯಗುರು ದುರುಗಪ್ಪ, ಪ್ರಾಂಶುಪಾಲ ಸುರೇಶ್ ವಿಭೂತಿ ಹಾಗೂ ಶಾಲೆ ಮತ್ತು ಪದವಿ ಕಾಲೇಜಿನ ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು. ಪರಿಶೀಲನೆ ವೇಳೆ ಪಂಚಾಯಿತಿ ಸಿಬ್ಬಂದಿ ವೆಂಕೋಬ, ಮುದರಂಗಪ್ಪ, ರಾಯಪ್ಪ, ರವಿ, ರೈತ ಮುಖಂಡ ನರಸಣ್ಣ ನಾಯಕ, ಡಿವೈಎಫ್ಐ ಮುಖಂಡ ರಾಜು ನಾಯಕ, ದುರುಗಪ್ಪ ವರಟಿ, ಬಾಳಪ್ಪ ಬಾವಿಮನಿ, ಮೌನೇಶ ಸೇರಿದಂತೆ ಹಲವರು ಉಪಸ್ಥಿತರಿದ್ದರು.


ನೈಜ್ಯ ದೆಸೆ

ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.


# "ಕೃಷಿ ಇಲಾಖೆ ನೇಮಕಾತಿಯಲ್ಲಿ ನಿಯಮ ಉಲ್ಲಂಘನೆ ಆರೋಪ"

❏ **ನೈಜ್ಯ ದೆಸೆ ನ್ಯೂಸ್**

**ರಾಯಚೂರ: ಕೃಷಿ ಇಲಾಖೆ ನೇಮಕಾತಿಯಲ್ಲಿ ಸಿ&ಆರ್ (ವೃಂದ ಮತ್ತು ನೇಮಕಾತಿ) ನಿಯಮಗಳನ್ನು ಉಲ್ಲಂಘಿಸಿ ಬಿಇ ಬಯೋಟೆಕ್ ಹಾಗೂ ಐಸಿಎಆರ್ ಮಾನ್ಯತೆ ಇಲ್ಲದ ಖಾಸಗಿ ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸಲಾಗಿದೆ ಎಂದು ಆರೋಪಿಸಿ ಕೃಷಿ ವಿದ್ಯಾರ್ಥಿಗಳು ಸೋಮವಾರ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಆವರಣದಲ್ಲಿ ಪ್ರತಿಭಟನೆ ನಡೆಸಿದರು.**

ಕೃಷಿ ಅಧಿಕಾರಿ ಹಾಗೂ ಸಹಾಯಕ ಕೃಷಿ ಅಧಿಕಾರಿ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಕೈಗೊಂಡಿರುವ ಕ್ರಮವನ್ನು ಖಂಡಿಸಿದ ವಿದ್ಯಾರ್ಥಿಗಳು, ಮೂಲ ಸಿ&ಆರ್ ನಿಯಮಗಳನ್ನು ಉಲ್ಲಂಘಿಸಿ ಅರ್ಹತೆಯ ಮಾನದಂಡಗಳಲ್ಲಿ ಬದಲಾವಣೆ ಮಾಡಿರುವುದು ಕಾನೂನುಬಾಹಿರ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನಾಕಾರರು, ಕೃಷಿ ಪದವೀಧರರ ಹಕ್ಕುಗಳನ್ನು ಕಡೆಗಣಿಸಲಾಗುತ್ತಿದ್ದು, ಅವೈಜ್ಞಾನಿಕ 'ದೇಸಿ ಪ್ರೋಗ್ರಾಂ' ಜಾರಿಯಿಂದ ರೈತರು ಕೂಡ



ಸಂಕಷ್ಟಕ್ಕೆ ಸಿಲುಕುತ್ತಿದ್ದಾರೆ ಎಂದು ಆರೋಪಿಸಿದರು. ಕೃಷಿ ಇಲಾಖೆಯ ನೇಮಕಾತಿಯಲ್ಲಿ ಕೃಷಿ ಪದವಿ ಪಡೆದ ವಿದ್ಯಾರ್ಥಿಗಳಿಗೆ ಮಾತ್ರ ಆದ್ಯತೆ ನೀಡಬೇಕು ಎಂದು ಒತ್ತಾಯಿಸಿದರು. ಈ ವೇಳೆ, "ನಿಯಮಬಾಹಿರ ನೇಮಕಾತಿ ರದ್ದಾಗಬೇಕು", "ಕೃಷಿ ವಿದ್ಯಾರ್ಥಿಗಳ ಭವಿಷ್ಯ ಕಸಿದುಕೊಳ್ಳುತ್ತಿರುವ ಕೆಇಎಗೆ ಧಿಕ್ಕಾರ" ಎಂಬ ಘೋಷಣೆಗಳನ್ನು ಕೂಗಿ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು. ನೂರಾರು ವಿದ್ಯಾರ್ಥಿಗಳು ಬ್ಯಾನರ್‌ಗಳನ್ನು ಹಿಡಿದು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಪ್ರತಿಭಟನೆಯಲ್ಲಿ ಮಾತನಾಡಿದ ವಿದ್ಯಾರ್ಥಿ ಮುಖಂಡರು, 2025ರ ಏಪ್ರಿಲ್ 10ರಂದು ಸುಪ್ರೀಂ ಕೋರ್ಟ್ ನೀಡಿದ ತೀರ್ಪಿನಂತೆ, ಹೊಸ ನೇಮಕಾತಿ ಅಧಿಸೂಚನೆಯಲ್ಲಿ ಪ್ರಕಟಿಸಿರುವ ಅರ್ಹತಾ ಮಾನದಂಡಗಳನ್ನು ನೇಮಕಾತಿ ಪ್ರಕ್ರಿಯೆ ಮಧ್ಯದಲ್ಲಿ ಬದಲಾಯಿಸಲು ಅವಕಾಶವಿಲ್ಲ ಎಂದು ತಿಳಿಸಿದರು. ಆದರೂ ಕೃಷಿ ಇಲಾಖೆ ಹಾಗೂ ಕೆಇಎ ಕೊನೆ ಕ್ಷಣದಲ್ಲಿ ಐಸಿಎಆರ್ ಮಾನ್ಯತೆ ಇಲ್ಲದ ಖಾಸಗಿ 'ರೈಟೆಕ್' ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ ಪರೀಕ್ಷೆಗೆ ಅವಕಾಶ ಕಲ್ಪಿಸಿರುವುದು ಕಾನೂನು ಉಲ್ಲಂಘನೆಯಾಗಿದೆ ಎಂದು ಆರೋಪಿಸಿದರು.

ಕೃಷಿ ಇಲಾಖೆಯ ಕೃಷಿ ಅಧಿಕಾರಿ ಹಾಗೂ ಸಹಾಯಕ ಕೃಷಿ ಅಧಿಕಾರಿ ಹುದ್ದೆಗಳಿಗೆ ಬಿ.ಇ. ಬಯೋಟೆಕ್ ಪದವೀಧರರಿಗೆ ಅವಕಾಶ ಕಲ್ಪಿಸಿರುವ ಕ್ರಮವನ್ನು ಕೃಷಿ ವಿದ್ಯಾರ್ಥಿಗಳು ತೀವ್ರವಾಗಿ ವಿರೋಧಿಸಿದ್ದಾರೆ. ಕೃಷಿ ಶಿಕ್ಷಣದ ಹಿನ್ನೆಲೆ ಇಲ್ಲದ ಅಭ್ಯರ್ಥಿಗಳಿಗೆ ಕೃಷಿ ಇಲಾಖೆಯ ತಾಂತ್ರಿಕ ಹುದ್ದೆಗಳಲ್ಲಿ ಅವಕಾಶ ನೀಡುವುದು ಇಲಾಖೆಯ ಉದ್ದೇಶ ಹಾಗೂ ರೈತರ ಹಿತಾಸಕ್ತಿಗೆ ವಿರುದ್ಧವಾಗಿದೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಕೃಷಿ ಕ್ಷೇತ್ರದ ತಾಂತ್ರಿಕ ಜ್ಞಾನ, ಬೆಳೆ ನಿರ್ವಹಣೆ, ಮಣ್ಣಿನ ಆರೋಗ್ಯ, ಕೀಟ ಹಾಗೂ ರೋಗ ನಿಯಂತ್ರಣ ಸೇರಿದಂತೆ ಕೃಷಿ ಸಂಬಂಧಿತ ವಿಷಯಗಳಲ್ಲಿ ಪರಿಣತಿ ಹೊಂದಿರುವ ಕೃಷಿ ಪದವೀಧರರಿಗೆ ಆದ್ಯತೆ ನೀಡಬೇಕಾಗಿದ್ದು, ಬಿ.ಇ. ಬಯೋಟೆಕ್ ಪದವೀಧರರನ್ನು ಈ ಹುದ್ದೆಗಳಿಗೆ ಪರಿಗಣಿಸುವ ನಿರ್ಧಾರವನ್ನು ಸರ್ಕಾರ ಮರುಪರಿಶೀಲಿಸಬೇಕು ಎಂದು ಒತ್ತಾಯಿಸಿದರು.

ಆದ್ದರಿಂದ, ಕೃಷಿ ಇಲಾಖೆಯ ಎಒ ಮತ್ತು ಎಎಒ ಹುದ್ದೆಗಳ ನೇಮಕಾತಿಯಿಂದ ಬಿ.ಇ. ಬಯೋಟೆಕ್ ಪದವೀಧರರಿಗೆ ನೀಡಿರುವ ಅವಕಾಶವನ್ನು ತಕ್ಷಣವೇ ಹಿಂಪಡೆದು, ಮೂಲ ಸಿ&ಆರ್ (ವೃಂದ ಮತ್ತು ನೇಮಕಾತಿ) ನಿಯಮಗಳ ಅನ್ವಯ ಕೃಷಿ ಪದವೀಧರರಿಗೆ ಮಾತ್ರ ಅವಕಾಶ ಕಲ್ಪಿಸಬೇಕು ಎಂದು ವಿದ್ಯಾರ್ಥಿಗಳು ಆಗ್ರಹಿಸಿದರು.

ಸಂವಿಧಾನದ 309ನೇ ವಿಧಿಯಡಿ ರೂಪಿಸಲಾದ ಮೂಲ ಸಿ&ಆರ್ ನಿಯಮಗಳನ್ನು ಯಾವುದೇ ಸಾಮಾನ್ಯ ಸರ್ಕಾರಿ ಆದೇಶಗಳು ಮೀರುವಂತಿಲ್ಲ. ಹೀಗಾಗಿ ಕೃಷಿ ಇಲಾಖೆ ಹಾಗೂ ಕೆಇಎ ಕೈಗೊಂಡಿರುವ ಕ್ರಮದಿಂದ ಸರ್ಕಾರಿ ಕೃಷಿ ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳಿಗೆ ಅನ್ಯಾಯವಾಗುತ್ತಿದ್ದು, ರೈಟೆಕ್ ವಿಶ್ವವಿದ್ಯಾಲಯಕ್ಕೆ ನೀಡಿರುವ ಅವಕಾಶವನ್ನು ತಕ್ಷಣವೇ ರದ್ದುಪಡಿಸಿ ಮೂಲ ನಿಯಮಗಳ ಪ್ರಕಾರವೇ ನೇಮಕಾತಿ ಪ್ರಕ್ರಿಯೆ ನಡೆಸಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### ಡೈರಿ ಟೆಕ್ನಾಲಜಿಯು

Dairy Technology ಡೈರಿ ಟೆಕ್ನಾಲಜಿಯು ಹಾಲು ಉತ್ಪಾದನೆ, ಸಂಸ್ಕರಣೆ, ಪ್ಯಾಕೇಜಿಂಗ್ ಮತ್ತು ಡೈರಿ ಉತ್ಪನ್ನಗಳ (ಉದಾ: ಚೀಸ್, ಬೆಣ್ಣೆ, ಐಸ್‌ಕ್ರೀಮ್) ಅಭಿವೃದ್ಧಿಯ ಬಗ್ಗೆ ಅಧ್ಯಯನ ಮಾಡುವ ಎಂಜಿನಿಯರಿಂಗ್ ಮತ್ತು ವಿಜ್ಞಾನ ವಿಭಾಗವಾಗಿದೆ. ಇದು ಆಹಾರ ತಂತ್ರಜ್ಞಾನದ ಪ್ರಮುಖ ಭಾಗವಾಗಿದ್ದು, ಡೈರಿ ವಿಜ್ಞಾನ, ಸೂಕ್ಷ್ಮ ಜೀವವಿಜ್ಞಾನ ಮತ್ತು ವ್ಯವಹಾರ ನಿರ್ವಹಣೆಯನ್ನು ಒಳಗೊಂಡಿದೆ.ಕರ್ನಾಟಕದ ಪ್ರಮುಖ ಸಂಸ್ಥೆಗಳಲ್ಲಿ ಒಂದಾದ ಬೆಂಗಳೂರಿನ ಹೆಬ್ಬಾಳದಲ್ಲಿರುವ ಡೈರಿ ಸೈನ್ಸ್ ಕಾಲೇಜಿನಲ್ಲಿ ಬಿ.ಟೆಕ್ (B.Tech) ಇನ್ ಡೈರಿ ಟೆಕ್ನಾಲಜಿ ಪದವಿ ಲಭ್ಯವಿದೆ.ಕೋರ್ಸ್ ವಿವರಗಳು ಮತ್ತು ಪ್ರಮುಖ ಅಂಶಗಳು:ಅರ್ಹತೆ: ಪಿಯುಸಿ ಅಥವಾ 12ನೇ ತರಗತಿಯಲ್ಲಿ ಪಿಸಿಎಂ (PCM – ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತ) ವಿಷಯಗಳನ್ನು ಕಡ್ಡಾಯವಾಗಿ ಓದಿರಬೇಕು. ಕಾಲಾವಧಿ: 4 ವರ್ಷಗಳು (8 ಸೆಮಿಸ್ಟರ್‌ಗಳು).ಕಲಿಯುವ ವಿಷಯಗಳು: ಡೈರಿ ಮೈಕ್ರೋಬಯಾಲಜಿ, ಹಾಲು ಮತ್ತು ಹಾಲಿನ ಉತ್ಪನ್ನಗಳ ರಸಾಯನಶಾಸ್ತ್ರ, ಡೈರಿ ಎಂಜಿನಿಯರಿಂಗ್, ಪ್ಯಾಕೇಜಿಂಗ್ ತಂತ್ರಜ್ಞಾನ ಮತ್ತು ಗುಣಮಟ್ಟ ನಿಯಂತ್ರಣ. ಉದ್ಯೋಗಾವಕಾಶಗಳು:ಈ ಕೋರ್ಸ್ ಮುಗಿಸಿದ ನಂತರ ಡೈರಿ ಪ್ಲಾಂಟ್ ಮ್ಯಾನೇಜರ್, ಕ್ವಾಲಿಟಿ ಕಂಟ್ರೋಲ್ ಆಫೀಸರ್, ಪ್ರೊಡಕ್ಷನ್ ಮ್ಯಾನೇಜರ್ ಮುಂತಾದ ಹುದ್ದೆಗಳಲ್ಲಿ ಖಾಸಗಿ ಮತ್ತು ಸರ್ಕಾರಿ ಡೈರಿ ಉದ್ಯಮಗಳಲ್ಲಿ ಕೆಲಸ ಮಾಡಬಹುದು.

## ಸರ್ಕಾರಿ ಹುದ್ದೆಗಳ ನೇಮಕಾತಿಯಲ್ಲಿ ದ್ವಿತೀಯ ಪಿಯುಸಿಗೆ ಐಟಿಐ ಕೋರ್ಸನ್ನು ತತ್ಸಮಾನ ಮಾನ್ಯತೆಯಾಗಿ ಪರಿಗಣಿಸುವಂತೆ ಎ ಐ ಡಿ ವೈ ಓ ಒತ್ತಾಯ

❏ ನೈಜ್ಯ ದೆಸೆ ನ್ಯೂಸ್

ಲಿಂಗಸಗೂರು: ಸರ್ಕಾರಿ ಹುದ್ದೆಗಳ ನೇಮಕಾತಿಯಲ್ಲಿ ಐಟಿಐ ಕೋರ್ಸನ್ನು ದ್ವಿತೀಯ ಪಿಯುಸಿಗೆ ತತ್ಸಮಾನ ಮಾನ್ಯತೆಯಾಗಿ ಪರಿಗಣಿಸಬೇಕೆಂದು ಒತ್ತಾಯಿಸಿ ಆಲ್ ಇಂಡಿಯಾ ಡೆಮಾಕ್ರೆಟಿಕ್ ಯೂತ್ ಆರ್ಗನೈಜೇಷನ್ (ಎಐಡಿವೈಒ) ಸಂಘಟನೆ ಮುಖಂಡರು ಸಹಾಯಕ ಆಯುಕ್ತರಿಗೆ ಮನವಿ ಸಲ್ಲಿಸಿದರು.

ಸರ್ಕಾರ ಸಿವಿಲ್ ಪೊಲೀಸ್, ಡಿಆರ್–ಸಿಆರ್ ಪೊಲೀಸ್, ಕೆಎಸ್‌ಆರ್‌ಪಿ ಸೇರಿದಂತೆ ಹಲವು ಇಲಾಖೆಗಳಲ್ಲಿ ನೇಮಕಾತಿಗಾಗಿ ಅಧಿಸೂಚನೆ ಹೊರಸಿದೆ. ಆದರೆ ಸದರಿ ಹುದ್ದೆಗಳ ಭರ್ತಿಗೆ ವಿದ್ಯಾರ್ಹತೆಯಲ್ಲಿ ಐಟಿಐ ಕೋರ್ಸ ಮುಗಿಸಿದ ಅಭ್ಯರ್ಥಿಗಳು ಕಡ್ಡಾಯವಾಗಿ ಎನ್‌ಐಒಎಸ್ ನಲ್ಲಿ ಭಾಷಾ ಕೋರ್ಸ ಹಾಗೂ ಶೈಕ್ಷಣಿಕ ವಿಷಯದಲ್ಲಿ ಉತ್ತೀರ್ಣರಾಗಿರ ಬೇಕೆಂದು ನಿರ್ದೇಶನ ನೀಡಲಾಗಿದೆ. ಆದರೆ ಈ ಹಿಂದೆ ರಾಜ್ಯ ಸರ್ಕಾರ ಐಟಿಐ ಪೂರ್ಣ ಗೊಳಿಸಿದವರಿಗೆ ಅರ್ಜಿ ಹಾಕಲು ಅವಕಾಶ ನೀಡಿತ್ತು ಮತ್ತು




ಐಟಿಐ ಕೋರ್ಸನ್ನು ದ್ವಿತೀಯ ಪಿಯುಸಿಗೆ ಸಮಾನ ಮಾನ್ಯತೆಗಾಗಿ ಪರಿಗಣಿಸಲಾಗಿತ್ತು. ಇದರಿಂದ ಬಹುದೊಡ್ಡ ಸಂಖ್ಯೆಯ ಐಟಿಐ ಕೋರ್ಸ ಮುಗಿಸಿದ ಅಭ್ಯರ್ಥಿಗಳು ವಿವಿಧ ನೇಮಕಾತಿಗಳಲ್ಲಿ ಅವಕಾಶಹೊಂದಿದ್ದರು.

ಇದೀಗ ಎನ್‌ಐಒಎಸ್ ಪರೀಕ್ಷೆಯನ್ನು ಕಡ್ಡಾಯವಾಗಿ ಉತ್ತೀರ್ಣರಾಗಿರ ಬೇಕೆಂದು ನಿಬಂಧನೆ ವಿಧಿಸಿರುವುದು ಐಟಿಐ ಅಭ್ಯರ್ಥಿಗಳನ್ನು ಹೊರಗೆ ಉಳಿಯುವಂತೆ ಮಾಡಿದೆ. ಎನ್‌ಐಒಎಸ್ ಭಾಷಾ ಪರೀಕ್ಷೆಗಳನ್ನು ನಿಯಮಿತವಾಗಿ ನಡೆಸದಿರುವುದು ಮತ್ತು ಅದರ ಬಗ್ಗೆ ಸರಿಯಾದ ಮಾಹಿತಿ ಲಭ್ಯವಿಲ್ಲದಿರುವುದು ಐಟಿಐ ಮುಗಿಸಿದ ಬಹಳಷ್ಟು ವಿದ್ಯಾರ್ಥಿಗಳಿಗೆ ತೊಂದರೆ ಉಂಟು ಮಾಡಿದೆ. ಕೂಡಲೇ ಸರ್ಕಾರ ಸಿವಿಲ್ ಪೊಲೀಸ್, ಡಿಆರ್ ಸಿಆರ್ ಪೊಲೀಸ್, ಕೆಎಸ್‌ಆರ್‌ಪಿ ಸೇರಿದಂತೆ ಹಲವು ಇಲಾಖೆಗಳಲ್ಲಿ ನೇಮಕಾತಿಯಲ್ಲಿ ಐಟಿಐ ಕೋರ್ಸನ್ನು ದ್ವಿತೀಯ ಪಿಯುಸಿಗೆ ತತ್ಸಮಾನ ಮಾನ್ಯತೆಯಾಗಿ ಪರಿಗಣಿಸಬೇಕೆಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಎಐಡಿವೈಒ ಜಿಲ್ಲಾಧ್ಯಕ್ಷ ಚನ್ನಬಸವ ಜಾನೇಕಲ್, ಉಪಾಧ್ಯಕ್ಷ ತಿರುಪತಿ ಗೋನವಾರ, ಮುಖಂಡರಾದ ಬಾಲಾಜಿ ಸಿಂಗ್, ಕಿರಣ್ ಕುಮಾರ, ಶರಣಬಸವ, ವೀರೇಂದ್ರ, ಅಮರೇಶ, ವೀರೇಶ, ರಮೇಶ ಸೇರಿದಂತೆ ಇತರರು ಇದ್ದರು.

## ದೇವದುರ್ಗದಲ್ಲಿ ಬಾಲವಿಕಾಸ ನಡಿಗೆ ಪಾಲಕರ ಕಡೆಗೆ ತರಬೇತಿ ಕಾರ್ಯಕ್ರಮ ಯಶಸ್ವಿ

❏ ನೈಜ್ಯ ದೆಸೆ ನ್ಯೂಸ್

ರಾಯಚೂರು ಜುಲೈ 14 (ಕರ್ನಾಟಕ ವಾರ್ತೆ): ರಾಯಚೂರು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ರಾಯಚೂರು, ಕರ್ನಾಟಕ ಬಾಲವಿಕಾಸ ಅಕಾಡೆಮಿ ಧಾರವಾಡ ಶಿಶು ಅಭಿವೃದ್ಧಿ ಯೋಜನೆ ದೇವದುರ್ಗ ಹಾಗೂ ಶಾಲಾ ಮತ್ತು ಶಿಕ್ಷಣ ಇಲಾಖೆ ದೇವದುರ್ಗ ಇವರ ಸಹಯೋಗದಲ್ಲಿ ಬಾಲವಿಕಾಸ ನಡಿಗೆ ಪಾಲಕರ ಕಡೆಗೆ ಒಂದು ದಿನದ ತರಬೇತಿ ಕಾರ್ಯಕ್ರಮವು ಯಶಸ್ವಿಯಾಗಿ ನಡೆಯಿತು.



ಈ ಕಾರ್ಯಕ್ರಮವನ್ನು ಮೊದಲಿಗೆ ಪ್ರಾಥ–ರ್ನೆ ಗೀತೆಯೊಂದಿಗೆ ಲಕ್ಷ್ಮಿ ಮೇಲ್ವಿಚಾರಕಿ ಶಿಶು ಅಭಿವೃದ್ಧಿ ಯೋಜನೆ ದೇವದುರ್ಗ ಇವರು ಪ್ರಾರಂಭಿಸಿದರು. ನಂತರ ಅಧ್ಯಕ್ಷತೆ ವಹಿಸಿದ ಮಹೇಶ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ದೇವದುರ್ಗ, ಸ್ತ್ರೀ ಶಕ್ತಿ ಒಕ್ಕೂಟದ ಅಧ್ಯಕ್ಷರಾದ ಶರಣಮ್ಮ ದೇವದುರ್ಗ, ಸಂಪನ್ಮೂಲ ವ್ಯಕ್ತಿಗಳಾದ ಭರತ್ ಕುಮಾರ್, ಚಂದನಕರ್ ಧಾರವಾಡ, ಮಲ್ಟಿ ಟಾಸ್ಕಿಂಗ್ ಅಧಿಕಾರಿಗಳಾದ ಶಾಂತಾ, ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ ಯೋಜನಾ ಸಂಯೋಜಕರಾದ ಮೋಹನ್ ಕುಮಾರ್ ರಾಯಚೂರು, ಜಿಲ್ಲಾ ಸಂಯೋಜ–ಕರು ಪೋಷಕತ್ವ ಯೋಜನೆ ಡಾನ್ ಬೋಸ್ಕೋ ಸಂಯೋಜಕರಾದ ನಾಗರಾಜ ದೇವದುರ್ಗ, ಜಿಲ್ಲಾ ಬಾಲ ಭವನ ಕಾರ್ಯಕ್ರಮ ಸಂಯೋಜಕಾರದ ದೀಪಾ ರಾಯಚೂರು,

## ಜಾಲಹಳ್ಳಿ ಗ್ರಾ.ಪಂ. ನೂತನ ಅಧ್ಯಕ್ಷರ ಸ್ಥಾನಕ್ಕೆ ನಾಳೆ (ಜುಲೈ 16) ಚುನಾವಣೆ: ಕುತೂಹಲ ಮೂಡಿಸಿದ ರಾಜಕೀಯ ನಡೆ!

❏ ನೈಜ್ಯ ದೆಸೆ ನ್ಯೂಸ್

ಜಾಲಹಳ್ಳಿ: ಜಾಲಹಳ್ಳಿ ಗ್ರಾಮ ಪಂಚಾಯಿತಿಯಲ್ಲಿ ತೆರವಾಗಿರುವ ಅಧ್ಯಕ್ಷರ ಸ್ಥಾನಕ್ಕೆ ನಾಳೆ (ಜುಲೈ 16) ಚುನಾವಣೆ ನಡೆಯಲಿದ್ದು, ಗ್ರಾಮದಲ್ಲಿ ರಾಜ–ಕೀಯ ಚಟುವಟಿಕೆಗಳು ತೀವ್ರಗೊಂಡಿವೆ. ನೂತನ ಅಧ್ಯಕ್ಷರಾಗಿ ಯಾರು ಆಯ್ಕೆಯಾಗಲಿದ್ದಾರೆ ಎಂಬ ಕುತೂಹಲ ಗ್ರಾಮಸ್ಥರಲ್ಲಿ ಹೆಚ್ಚಾಗಿದೆ.

ಈ ಹಿಂದೆ ಗ್ರಾಮ ಪಂಚಾಯಿತಿ ಅಧ್ಯಕ್ಷೆಯಾಗಿದ್ದ ವಿಜಯಲಕ್ಷ್ಮಿ ಯಂಕೋಬ ತೋಟದ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರಿಂದ ಅಧ್ಯಕ್ಷ ಸ್ಥಾನ ತೆರವಾಗಿತ್ತು. ಈ




ಹಿನ್ನೆಲೆಯಲ್ಲಿ ನೂತನ ಅಧ್ಯಕ್ಷರ ಆಯ್ಕೆಗಾಗಿ ದೇವದುರ್ಗ ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ (ಇ.ಒ.) ರಾಜೇಂದ್ರ ಕುಮಾರ್ ಅವರು ಜುಲೈ 16ರಂದು ವಿಶೇಷ ಸಭೆ ಕರೆದಿದ್ದು, ಪಂಚಾಯಿತಿಯ ಎಲ್ಲಾ ಸದಸ್ಯ–ರಿಗೆ ಅಧಿಕೃತ ನೋಟಿಸ್ ಜಾರಿಗೊಳಿಸಲಾಗಿದೆ.

ದೇವದುರ್ಗ ತಾಲ್ಲೂಕಿನ ಅತಿದೊಡ್ಡ ಗ್ರಾಮ ಪಂಚಾಯಿತಿ ಜಾಲಹಳ್ಳಿ ಗ್ರಾಮ ಪಂಚಾಯಿತಿ ದೇವದುರ್ಗ ತಾಲ್ಲೂಕಿನಲ್ಲಿಯೇ ಅತಿದೊಡ್ಡ ಗ್ರಾಮ ಪಂಚಾಯಿತಿಯಾಗಿದ್ದು, ಒಟ್ಟು 33 ಸದಸ್ಯರನ್ನು ಹೊಂದಿದೆ. ಪಂಚಾಯಿತಿಯಲ್ಲಿ ಬಿಜೆಪಿ, ಕಾಂಗ್ರೆಸ್ ಹಾಗೂ ಸಿಪಿಐ(ಎಂ) ಬೆಂಬಲಿತ ಸದಸ್ಯರಿರುವುದರಿಂದ ಅಧ್ಯಕ್ಷ ಸ್ಥಾನ ಯಾರ ಪಾಲಾಗಲಿದೆ ಎಂಬುದರ ಬಗ್ಗೆ ತೀವ್ರ ರಾಜಕೀಯ ಲೆಕ್ಕಾಚಾರಗಳು ನಡೆಯುತ್ತಿವೆ.

ಯಾರಿಗೆ ಸಿಗಲಿದೆ ಅಧ್ಯಕ್ಷ ಪಟ್ಟ? ವಿವಿಧ ರಾಜಕೀಯ ಪಕ್ಷಗಳ ಬೆಂಬಲಿತ ಸದಸ್ಯರು ತಮ್ಮದೇ ಆದ ತಂತ್ರಗಳನ್ನು ರೂಪಿಸಿಕೊಂಡಿದ್ದು, ಯಾವ ಸದಸ್ಯರು ಯಾ–ರಿಗೆ ಬೆಂಬಲ ನೀಡಲಿದ್ದಾರೆ ಎಂಬುದು ಕೊನೆಯ ಕ್ಷಣದವರೆಗೂ ಕುತೂಹಲಕ್ಕೆ ಕಾರಣವಾಗಿದೆ. ನಾಳೆಯ ಚುನಾವಣೆಯ ಫಲಿತಾಂಶ ಜಾಲಹಳ್ಳಿ ಗ್ರಾಮ ಪಂಚಾಯಿತಿಯ ಮುಂದಿನ ಆಡಳಿತದ ದಿಕ್ಕನ್ನು ನಿರ್ಧರಿಸಲಿದೆ.

ವರದಿ: ಖಾಜಾ ಹುಸೇನ್ ಬಾಬಾ, ಜಾಲಹಳ್ಳಿ

## ನಾಡ ಹಬ್ಬ ಜಂಬು ಸವಾರಿ ಪ್ರಾರಂಭಿಸಿದ ವೀರ ಕಂಪಿಲರಾಯನ ವಂಶಸ್ಥರಿಗೆ ಗೌರವ ನೀಡಿ

❏ ನೈಜ್ಯ ದೆಸೆ ನ್ಯೂಸ್

ಮಾನ್ವಿ. ಕ್ರಿ ಶಕ1296 ಆಸು ಪಾಸಿನಲ್ಲಿ ಬೇಡರ ಸಮುದಾಯದ ಪೂವಲ ಬೆಡಗಿನ ವಂಶಸ್ಥರಾದ ವೀರ ಕಂಪಿಲರಾಯನ ಕಾಲದಲ್ಲಿ ಆರಂಭವಾದ ಹೇಮಗುಡ್ಡದಲ್ಲಿ ಶ್ರೀ ದುರ್ಗಾದೇವಿ ಮೂರ್ತಿಯನ್ನು ಅಂಬಾರಿಯಲ್ಲಿ ಮೆರವಣಿಗೆ ಮಾಡುವ ಮೂಲಕ ಚಾಲನೆ ನೀಡಲಾಯಿತು ಇವರ ಸಂಸ್ಥಾನ ದೆಹಲಿ ಸುಲ್ತಾನರಿಂದ ದಾಳಿಯಿಂದ ಪತನವಾದ ಮೇಲೆ ಹಿರಿಯರ ಆಸೆಯಂತೆ ಕಂಪಿಲ್ಲ ರಾಯನ ಮೊಮ್ಮಕ್ಕಳಾದ ಹಕ್ಕ ಬುಕ್ಕ ನಾಯಕರು ಹಂಪಿ ಸಾಮ್ರಾಜ್ಯ ಸ್ಥಾಪನೆ ಮಾಡಿ ಸುಮಾರು 250 ವರ್ಷಗಳ ಕಾಲ ವಿಜೃಂಭಣೆಯಿಂದ ವಿಜಯದಶಮಿಯನ್ನು ನಡೆಸಿ ಕೊಟ್ಟ ಗೌರವ ಈ ವಂಶಕ್ಕೆ ಸಲ್ಲುತ್ತದೆ ಕಾರ್ಗಳ್ಳಿ ಮಾರಣ್ಣ ನಾಯಕ ಮೈಸೂರು ಭಾಗದಲ್ಲಿ 1399 ಕ್ಕಿಂತ ಮುಂಚೆ ಮೈಸೂರು ಪ್ರಾಂತ್ಯವು ವಿಜಯನಗರ ಸಾಮ್ರಾಜ್ಯದ ಆಧೀನದಲ್ಲಿತ್ತು



ಆಗ ಸ್ಥಳೀಯ ಪಾಳಗಾರರಿಗೆ ಆಡಳಿತದ ಹೊಣೆ ಹೊತ್ತಿದ್ದರು. ಕಾರ್ಗಳ್ಳಿ ಮಾರಣ್ಣ ನಾಯಕ ಒಬ್ಬ ಪ್ರಬಲ ಪಾಳೆಗಾರರಾಗಿದ್ದರು ಒಡೆಯರಿಕ್ಕಿಂತ ಮುಂಚೆ ರಾಜ್ಯಭಾರ ಮಾಡಿದವರು ನಮ್ಮ ಮಾರಣ್ಣ ನಾಯಕರು, ಹೀಗಾಗಿ ಜಂಬೂ ಸವಾರಿ ಪ್ರಾರಂಭ ಮಾಡಿದ್ದು ಕಂಪಿಲರಾಯನ ವಂಶಸ್ಥರು ಹಾಗೆ ಮೈಸೂರು ಪ್ರಾಂತ್ಯವನ್ನು ಆಳಿದವರು ಮಾರಣ್ಣ ನಾಯಕರು ಈ ಒಂದು ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಇಂಥ ಮಹಾನ್ ನಾಯಕರ ವಂಶಸ್ಥರನ್ನು ಜಂಬೂ ಸವಾರಿ ನಡೆಯುವ ಸಮಯದಲ್ಲಿ ಸರ್ಕಾರದಿಂದ ಅಹ್ವಾನ ನೀಡಿ ಗೌರವ ಸನ್ಮಾನ ಮಾಡಬೇಕು ಹಾಗೆ ಇವರ ಭಾವಚಿತ್ರಗಳನ್ನು ಅರಮನೆ ಯಲ್ಲಿ ಪ್ರದರ್ಶನಕ್ಕಿಬೇಕೆಂದು ಕರ್ನಾಟಕ ರಾಜ್ಯಬೇಡರ ಸಮಿತಿ ರಾಜ್ಯಾಧ್ಯಕ್ಷರಾದ ಅಂಬಣ್ಣ ನಾಯಕ ಗುಜ್ಜಲ್ ಹಾಗೂ ಕರ್ನಾಟಕ ವಾಲ್ಮೀಕಿ ನಾಯಕ ಮಹಾಸಭಾ ರಿ ಜಿಲ್ಲಾಧ್ಯಕ್ಷರಾದ ರಾಮಣ್ಣ ನಾಯಕ ರವರು ಮಾನ್ಯ ಮುಖ್ಯಮಂತ್ರಿಗಳಿಗೆ ಮಾನ್ವಿ ಯ ತಹಸಿಲ್ದಾರರ ಮುಖಾಂತರ ಮನವಿ ಪತ್ರ ಸಲ್ಲಿಸಿದರು ಈ ಸಂದರ್ಭದಲ್ಲಿ ಸಮುದಾಯದ ಮುಖಂಡರಾದ ವೆಂಕಟೇಶ್ ನಾಯಕ ನಾಯ್ಡು ನಾಯಕ ಕೊಂಡಯ್ಯ ನಾಯಕ ಆಂಜನೇಯ ನಸಲಾಪುರ ಅಯ್ಯಪ್ಪ ನಾಯಕ ನಲಗಂದಿನ್ನಿ ಜೆಲ್ಲಿ ಆಂಜನೇಯ್ಯ ನೀರಮಾನ್ವಿ ಜೆಲ್ಲಿ ಭೀಮರಾಯ ಜೆಲ್ಲಿ ಗೊಟ್ಟ ಹನುಮಂತ ಭೀಮಣ್ಣ ದೊರೆ ಬಾಲಯ್ಯ ನಾಯಕ ಕರೆಗುಡ್ಡ ಇನ್ನು ಹಲವಾರು ಸಮುದಾಯದ ಮುಖಂಡರು ಉಪಸ್ಥಿತಿ ಇದ್ದರು

# ಕಿಶೋರಿ ಕೇಂದ್ರಗಳ ಮೂಲಕ ಸಾಮಾಜಿಕ ಮೌಢ್ಯಗಳನ್ನು ದೂರಗೊಳಿಸಲು ವಿನೂತನ ಹೆಜ್ಜೆ

# ಬಾಲ್ಯ ವಿವಾಹ, ಅಪೌಷ್ಟಿಕತೆ, ಬಾಲ್ಯ ಕಾರ್ಮಿಕ ಪದ್ದತಿ ಕುರಿತು ಮಕ್ಕಳಿಗೆ ಜಾಗೃತಿ

❏ ನೈಜ್ಯ ದೆಸೆ ನ್ಯೂಸ್

ರಾಯಚೂರು ಜುಲೈ 15 (ಕರ್ನಾಟಕ ವಾರ್ತೆ): ಸಾಮಾಜಿಕ ಪಿಡುಗುಗಳಾದ ಬಾಲ್ಯ ವಿವಾಹ, ಬಾಲ್ಯ ಕಾರ್ಮಿಕ ಪದ್ದತಿ, ಹದಿಹರೆಯದವರಲ್ಲಿ ಅಪೌಷ್ಟಿಕತೆ ನಿರ್ಮೂಲನೆಗೆ ಜಿಲ್ಲಾದ್ಯಂತ ಪೈಲಟ್ ಮಾದ–ರಿಯಲ್ಲಿ ಕಿಶೋರಿ ಕೇಂದ್ರಗಳನ್ನು ರಾಯಚೂರು ಜಿಲ್ಲಾ ಪಂಚಾಯತ್ ವತಿಯಿಂದ ಆರಂಭಿಸಲಾಗಿದೆ.

ಜಿಲ್ಲೆಯಲ್ಲಿ ರಾಯಚೂರು ನಗರ, ದೇವದುರ್ಗ, ಜಾಲಹಳ್ಳಿ, ಅರಕೇರಾ ಹಾಗೂ ಗಬ್ಬೂರಿನಲ್ಲಿ ಕಿಶೋರಿಯರ ಸಮಗ್ರ ಬೆಳವಣಿಗೆ, ಆರೋಗ್ಯ ರಕ್ಷಣೆ, ಶಿಕ್ಷಣ, ಪೌಷ್ಟಿಕತೆ ಹಾಗೂ ಜೀವನ ಕೌಶಲ್ಯಗಳನ್ನು ಅಭಿವೃದ್ಧಿಪಡಿಸುವ ಉದ್ದೇಶದಿಂದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವತಿಯಿಂದ ಕಿಶೋರಿ ಕೇಂದ್ರಗಳನ್ನು ಪರಿಣಾಮಕಾರಿಯಾಗಿ ನಡೆಸಲಾಗುತ್ತಿದೆ. ಕಿಶೋರಿ ಕೇಂದ್ರಗಳ ಮೂಲಕ 13 ರಿಂದ 18 ವರ್ಷದ ಬಾಲಕಿಯರಿಗೆ ಆರೋಗ್ಯ ಮತ್ತು ಪೌಷ್ಟಿಕ ಆಹಾರದ ಮಹತ್ವ, ವೈಯಕ್ತಿಕ ಸ್ವಚ್ಛತೆ, ರಕ್ತಹೀನತೆ ತಡೆ, ಋತುಚಕ್ರದ ಸ್ವಚ್ಛತೆ, ಮಾನಸಿಕ ಆರೋಗ್ಯ, ಶಿಕ್ಷಣದ ಮಹತ್ವ, ಕಾನೂನು ಅರಿವು ಹಾಗೂ ಜೀವನ ಕೌಶಲ್ಯಗಳ ಕುರಿತು ನಿಯಮಿತವಾಗಿ ತರಬೇತಿ ಮತ್ತು ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಕೇಂದ್ರಗಳಲ್ಲಿ ಆರೋಗ್ಯ ತಪಾಸಣೆ, ಪೌಷ್ಟಿಕಾಂಶ ಕುರಿತು ಸಲಹೆ, ಯೋಗ ಮತ್ತು ವ್ಯಾಯಾಮ, ವ್ಯಕ್ತಿತ್ವ ವಿಕಸನ, ನಾಯಕತ್ವ ಗುಣಗಳ ಬೆಳೆಸುವ ಚಟುವಟಿಕೆಗಳು ಹಾಗೂ ವಿವಿಧ ಸ್ಪರ್ಧೆಗಳ ಮೂಲಕ ಬಾಲಕಿಯರ ಆತ್ಮವಿಶ್ವಾಸವನ್ನು ಹೆಚ್ಚಿಸುವ ಪ್ರಯತ್ನ ಮಾಡಲಾಗುತ್ತಿದೆ. ಶಾಲೆ ತೊರೆದ ಕಿಶೋರಿಯರನ್ನು ಮತ್ತೆ ಶಿಕ್ಷಣದ




ಮುಖ್ಯವಾಹಿನಿಗೆ ತರಲು ಹಾಗೂ ಕೌಶಲ್ಯಾಭಿವೃದ್ಧಿ ತರಬೇತಿಗಳಿಗೆ ಪ್ರೋತ್ಸಾಹ ನೀಡಲಾಗುತ್ತಿದೆ.

ಆರೋಗ್ಯ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಆರೋಗ್ಯ ಇಲಾಖೆ, ಶಿಕ್ಷಣ ಇಲಾಖೆ ಹಾಗೂ ಸ್ಥಳೀಯ ಸಂಸ್ಥೆಗಳ ಸಹಯೋಗದಲ್ಲಿ ಕಿಶೋರಿ ಕೇಂದ್ರಗಳ ಚಟುವಟಿಕೆಗಳನ್ನು ಇನ್ನಷ್ಟು ಪರಿಣಾಮಕಾ–ರಿಯಾಗಿ ಅನುಷ್ಠಾನಗೊಳಿಸಲಾಗುತ್ತಿದೆ. ಬಾಲ್ಯವಿವಾಹ ತಡೆ, ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆ, ಮಹಿಳಾ ಸುರಕ್ಷತೆ ಮತ್ತು ಮಕ್ಕಳ ಹಕ್ಕುಗಳ ಕುರಿತು ಜಾಗೃತಿ ಮೂಡಿಸುವ ಕಾರ್ಯಗಳಿಗೂ ವಿಶೇಷ ಆದ್ಯತೆ ನೀಡಲಾಗಿದೆ. ಕಿಶೋರಿ ಕೇಂದ್ರಗಳ ಮಹತ್ವ ಹಾಗೂ ಉದ್ದೇಶ: ಪ್ರಾದೇಶಿಕತೆ, ಭಾಷೆ, ಧರ್ಮ ಎಲ್ಲವನ್ನೂ ಮೀರಿ ಇಂದು ಎಲ್ಲ ಪ್ರದೇಶಗಳಲ್ಲಿ ಕಂಡು ಬರುವ ಬಾಲ್ಯವಿವಾಹದಿಂದ ಇಡೀ ಸಾಮಾಜಿಕ ಜೀವನ ಅಸ್ತವ್ಯಸ್ತವಾಗುತ್ತದೆ. ಬಡತನ, ಅನಕ್ಷರತೆ ಸೇರಿ ನಾನಾ ಕಾರಣಗಳಿಂದ ಹದಿಹರೆಯದಲ್ಲೇ ಮಕ್ಕಳು ಮದುವೆಯ ಬಂಧನಕ್ಕೆ ಒಳಗಾಗಿ, ದೈಹಿಕ ಮತ್ತುಮಾನಸಿಕವಾಗಿ ಕುಗ್ಗುತ್ತಾರೆ. ಬಾಲ್ಯಾವಸ್ಥೆಯಲ್ಲಿಯೇ ಗರ್ಭಿಣಿಯಾಗುವುದ–ರಿಂದ ಅವಧಿ ಪೂರ್ವ ಪ್ರಸವ, ಅಪೌಷ್ಟಿಕ ಮಕ್ಕಳ ಜನನ, ರಕ್ತಹೀನತೆ ಸೇರಿ ನಾನಾ ಸಮಸ್ಯೆಗಳಿಂದ ಬಳಲುತ್ತಾರೆ. ಇವುಗಳು ದೇಶದ ಅಭಿವೃದ್ಧಿಗೆ ಕುಂಠಿತಗೊಳಿಸುತ್ತವೆ. ಇದನ್ನು ಹಂತ ಹಂತವಾಗಿ ನಿಯಂತ್ರಿಸಲು ಒಂದೇ ಸೂರಿನಡಿ ಹೆಣ್ಣು ಮಕ್ಕಳಿಗೆ ಸದೃಡ ವ್ಯಕ್ತಿತ್ವ ರೂಪಗೊಳಿಸಲು ಸಿದ್ದವಾಗಿರುವ ಮುಕ್ತ ಚರ್ಚೆಯ ವೇದಿಕೆ ಎಂದರೆ ತಪ್ಪಾಗಲಾರದು.

ಬಾಲ್ಯವಿವಾಹದ ದುಷ್ಪರಿಣಾಮಗಳ ಮನವರಿಕೆ: ಸಾಮಾಜಿಕ ಪಿಡುಗುಗಳು ಇಂದಿಗೂ ಹೆಣ್ಣು ಮಗುವಿನ ಶೋಷಣೆಗೆ ಬಲವಾಗಿ ಬೇರು–ರಿವೆ. ಅದರಲ್ಲೂ ಬಾಲ್ಯವಿವಾಹವು ಬಾಲಕಿಯ ಭವಿಷ್ಯವನ್ನೇ ನುಂಗಿಹಾಕುವ ಜೊತೆಗೆ ಬಾಲಕಿಂ–ಯ ಆರೋಗ್ಯದ ಮೇಲೆ ದುಷ್ಪರಿಣಾಮಗಳನ್ನುಂಟು ಮಾಡುವುದನ್ನು ತಡೆಯಲು ಕಾನೂನಿನ ಮಹತ್ವ ಕುರಿತು ತಿಳಿಸಲಾಗುತ್ತದೆ. ಅಲ್ಲದೆ ಹದಿಹರೆಯದ

**ಅನಿಷ್ಟ ಪದ್ದತಿಗಳ ತಡೆಗೆ ಹೆಚ್ಚಿನ ಜಾಗೃತಿ:**




**ಜಿಲ್ಲೆಯಲ್ಲಿ ಎಲ್ಲ ತಾಲೂಕುಗಳಲ್ಲಿ ಕಿಶೋರಿ ಕೇಂದ್ರಗಳನ್ನು ಆರಂಭಿಸುವ ಗುರಿ ಹೊಂದಲಾಗಿದ್ದು, ಹೆಣ್ಣು ಮಕ್ಕಳ ಬಾಲ್ಯ ಜೀವನವನ್ನು ಸುಂದರವಾಗಿಸಿ, ಶಿಕ್ಷಣ ಮಹತ್ವ ತಿಳಿಸುತ್ತಾ, ಬಾಲ್ಯ ವಿವಾಹ, ಬಾಲ ಕಾರ್ಮಿಕ ಪದ್ದತಿ, ಮುಂತಾದ ಅನಿಷ್ಠ ಪದ್ದತಿಗಳ ತಡೆಗೆ ಹೆಚ್ಚಿನ ಜಾಗೃತಿಯ ಗುರಿ ಹೊಂದಲಾಗಿದೆ– ಈಶ್ವರ ಕುಮಾರ್ ಕಾಂದೂ, ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ರಾಯಚೂರು.**

ಆರೋಗ್ಯ ಸುರಕ್ಷತೆ, ಅದರಲ್ಲೂ ವೈಯಕ್ತಿಕ ಶುಚಿತ್ವ, ಋತುಚಕ್ರ ನಿರ್ವಹಣೆ, ಪೌಷ್ಟಿಕ ಅಹಾರ ಸೇವನೆ, ಕೈತೊಳೆಯುವ ಮಹತ್ವ, ಕುರಿತು ಜಾಗೃತಿ ಮೂಡಿಸುವುದು. ಇದಕ್ಕಾಗಿ ಆಪ್ತಸಮಾಲೋಚನೆ ಏರ್ಪಡಿಸಿ ಮುಕ್ತವಾಗಿ ಅನಿಸಿಕೆ ಅಭಿಪ್ರಾಯಗಳನ್ನು ಆಲಿಸಿ ಪರಿಹಾರ ಒಸಗಿಸಲಾಗುವುದು. ಬಾಲ ಕಾರ್ಮಿಕ ಪದ್ದತಿಯಡಿ 14 ವರ್ಷದೊಳಗಿನ ಮಕ್ಕಳು ಅದರಲ್ಲೂ ಹೆಣ್ಣು ಮಗುವಿಗೆ ದೈಹಿಕ, ಮಾನಸಿಕ ಕ್ಷೋಭೆಯನ್ನು ಉಂಟು ಮಾಡುವುದು.

ಇದನ್ನು ತಡೆಯಲು ಜಾಗೃತಿ ಮೂಡಿಸಲಾಗುವುದು. ದೈಹಿಕ ಸದೃಢತೆಯನ್ನು ಕಾಪಾಡಲು ಬಾಲಕಿಯರು ಕ್ರೀಡಾ ಚಟುವಟಿ–ಕೆಗಳಲ್ಲಿ ಸಕ್ರೀಯವಾಗಿ ಭಾಗವಹಿಸುವಂತೆ ಪ್ರೋತ್ಸಾಹಿಸಲಾಗುವುದು. ಅಲ್ಲದೆ ಉನ್ನತ ಸಾಧನೆಗಾಗಿ ತಮ್ಮ ಕನಸುಗಳನ್ನು ಸಾಕಾರಗೊಳಿಸಲು, ಶಿಕ್ಷಣ ತಜ್ಞರಿಂದ ಉಪನ್ಯಾಸ ಕಾರ್ಯಕ್ರಮಗಳನ್ನು ಸಹ ಏರ್ಪಡಿಸಲಾಗುವುದು.

**ಭವಿಷ್ಯ ರೂಪಿಸುವ ಜ್ಞಾನಕೇಂದ್ರಗಳಾಗಲಿವೆ:**



**ಜಿಲ್ಲೆಯ ಭೌಗೋಳಿಕ ಹಿನ್ನಲೆ ನೋಡಿದಾಗ ಬಯಲು ಪ್ರದೇಶ ಹಾಗೂ ಕುರುಚುಲು ಅರಣ್ಯ ಹೊಂದಿದೆ. ಅದರಲ್ಲೂ ದೊಡ್ಡಿ, ಹಟ್ಟಿಗಳಲ್ಲಿ ವಾಸವಿರುವ ಜನತೆಯ ಹೆಣ್ಣು ಮಕ್ಕಳಿಗೆ ಕೀಶೋರಿ ಕೇಂದ್ರಗಳು, ಪೌಷ್ಟಿಕಾಹಾರ ಸೇವನೆ, ವೈಯಕ್ತಿಕ ಶುಚಿತ್ವ, ಶಿಕ್ಷಣ, ಕ್ರೀಡೆಯ ಉತ್ತೆಜನಗೊಳಿಸುವ ಮೂಲಕ ಮುಂದಿನ ದಿನಗಳಲ್ಲಿ ಭವಿಷ್ಯ ರೂಪಿಸುವ ಜ್ಞಾನಕೇಂದ್ರಗಳಾಗಲಿವೆ**

**– ಪೂವಿತಾ ಎಸ್., ಜಿಲ್ಲಾಧಿಕಾರಿಗಳು, ರಾಯಚೂರು ಜಿಲ್ಲೆ.**

ಆರೋಗ್ಯ ಜಾಗೃತಿ ಶಿಬಿರ ಆಯೋಜನೆ: ಮಾನಸಿಕ ರೋಗ ತಜ್ಞರು, ಸ್ತ್ರೀರೋಗ ತಜ್ಞರು, ಮಕ್ಕಳ ತಜ್ಞರು ಹಾಗೂ ಹದಿಹರೆಯ ಆರೋಗ್ಯ ಆಪ್ತಸಮಾಲೋಚಕರು, ಆರೋಗ್ಯ ಸಿಬ್ಬಂದಿ, ಆಶಾ ಕಾರ್ಯಕರ್ತೆಯವರ ಮೂಲಕ ನಿಯಮಿತವಾಗಿ ಜಾಗೃತಿ ಶಿಬಿರ, ಬಾಲ ಗರ್ಭಣಿಯ ಆರೋಗ್ಯ ಸಮಸ್ಯೆಗಳು, ಕಬ್ಬಿಣಾಂಶದ ಮಹತ್ವಕ್ಕೆ ಹೆಚ್ಚಿನ ಒತ್ತು, ಅಗತ್ಯ ಆರೋಗ್ಯ ತಪಾಸಣೆ ಶಿಬಿರಗಳನ್ನು ಏರ್ಪಡಿಸಲಾಗುವುದು. ಅಲ್ಲದೆ ವಿವಿಧ ಸ್ವಯಂ ಸೇವಾ ಸಂಸ್ಥೆಗಳ ಮಕ್ಕಳ ಹಕ್ಕುಗಳು, ಮಕ್ಕಳ ಉಚಿತ ಸಹಾಯವಾಣಿ–1098, ಕುರಿತು ಜಾಗೃತಿ ನೀಡಲು ಅಣಿಯಾಗಿದ್ದಾರೆ. ಒಟ್ಟಾರೆಯಾಗಿ ಹೆಣ್ಣು ಮಗುವಿನ ಸಬಲಿಕರಣಕ್ಕಾಗಿ ಎಲ್ಲ ಇಲಾಖೆಗಳೊಂದಿಗೆ ರಾಯಚೂರಿನ ಜಿಲ್ಲಾ ಪಂಚಾಯತಿಯು ಉತ್ತಮ ಹೆಜ್ಜೆ ಹಾಕುತ್ತಿದೆ.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101